ಸೆಪ್ಟೆಂಬರ್ 2023, ಸಂಚಿಕೆ 3

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA
## ಲೀಸಾ ಇಂಡಿಯ
### ವಿಶೇಷ ಕನ್ನಡ ಸಂಚಿಕೆ



## ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಸೆಪ್ಟೆಂಬರ್ 2023, ಸಂಚಿಕೆ 3**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.



**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಫೀಟ್ ರಿಂಗ್‌ರೋಡ್
ಮೂರನೇ ಫೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ+91–080–26699512/ 26699522
ಫ್ಯಾಕ್ಸ್ +91–080–26699410
ಈಮೈಲ್: leisaindia@yahoo.co.in



**ಲೀಸಾ ಇಂಡಿಯ**

'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಸಂಸ್ಥೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.



**ಸಂಪಾದಕೀಯ ಮಂಡಳಿ**
**ಮುಖ್ಯ ಸಂಪಾದಕಿ :** ಟಿ.ಎಂ.ರಾಧ
**ವ್ಯವಸ್ಥಾಪಕ ಸಂಪಾದಕ :** ಕೆ.ವಿ.ಎಸ್.ಪ್ರಸಾದ್

**ಕನ್ನಡ ಅನುವಾದ**
ಹೇಮಾ ಹೆಬ್ಬಗೋಡಿ

**ಕನ್ನಡ ಅನುವಾದಗಳ ಸಮನ್ವಯ**
ಬಿ. ಎಂ. ಸಂಜನಾ

**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.

**ಪುಟ ವಿನ್ಯಾಸ**
ನಂದ ಕುಮಾರ್

**ಮುದ್ರಣ**
ಬ್ಲೂಸ್ಪ್ರೀಮ್ ಪ್ರಿಂಟಿಂಗ್, ಬೆಂಗಳೂರು


**ಮುಖಪುಟ ಚಿತ್ರ**
ಖಚಿತ ನೀರಾವರಿ ಸೌಲಭ್ಯದೊಂದಿಗೆ ಬೆಳೆ ಬೆಳೆಯುವ ಪ್ರದೇಶದ ವಿಸ್ತರಣೆಯ ಪರಿಣಾಮವಾಗಿ ರೈತರ ಆದಾಯ ಸುಧಾರಿಸಿತು

**ಚಿತ್ರ ಸೌಜನ್ಯ :**
ಕಲಿಕೆ – ಟಾಟಾ ಟ್ರಸ್ಟ್


## ಲೀಸಾ ಇಂಡಿಯ ಮ್ಯಾಗಜೀನ್

**ಇತರೆ ಪ್ರಾದೇಶಿಕ ಆವೃತ್ತಿಗಳು**
ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು



**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**



**ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ.**


# ಪ್ರಿಯ ಓದುಗರೇ

ಪ್ರಿಯ ಓದುಗರೇ,

ಲೀಸಾ ಇಂಡಿಯಾದ ಸೆಪ್ಟಂಬರ್ 2023ರ ಸಂಚಿಕೆಯನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಸಂತಸವಾಗುತ್ತಿದೆ. ಈ ಸಂಚಿಕೆಯು ಮುಖ್ಯವಾಗಿ ನೈಸರ್ಗಿಕ ಶಕ್ತಿಮೂಲಗಳು ಮತ್ತು ಕೃಷಿಪರಿಸರ ಶಾಸ್ತ್ರದ ಶಿಕ್ಷಣವನ್ನು ಕುರಿತಾಗಿದೆ.

ಭಾರತದಲ್ಲಿ ಶಕ್ತಿಸಂಪನ್ಮೂಲಗಳಿಗೆ ಬೇಡಿಕೆಯು ಹೆಚ್ಚುತ್ತಿದ್ದು, ಸೌರಶಕ್ತಿ ಆಧಾರಿತ ವ್ಯವಸ್ಥೆಗಳು ವಿಶ್ವಾಸಾರ್ಹ ಶಕ್ತಿ ಆಧಾರಿತ ವ್ಯವಸ್ಥೆಯಾಗಿದ್ದು ರೈತರಿಗೆ ನೆರವು ನೀಡುತ್ತದೆ. ಕಲಿಕೆ ಲೈವ್ಲಿಹುಡ್ಸ್ ತಂಡವು ನವೀಕರಿಸಬಹುದಾದ ಇಂಧನವನ್ನು ಆಧರಿಸಿದ ಮಾದರಿಗಳನ್ನು ಜಾರಿಗೆ ತಂದಿದೆ. ಕರ್ನಾಟಕದ ಯಾದಗಿರಿ ಜಿಲ್ಲೆಯಲ್ಲಿ ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸಿದೆ. ಅದೇ ರೀತಿ, ಸಂಸ್ಕೃತಿ ಸಂವರ್ಧನ ಮಂಡಲ ಎನ್ನುವ ಎನ್‌ಜಿಒ ಮಹಾರಾಷ್ಟ್ರದ ಸರ್ಗೋಲಿಯ ಗ್ರಾಮೀಣ ಮಹಿಳೆಯರಿಗೆ ಸಣ್ಣ ಉದ್ಯಮಗಳ ಮೂಲಕ ಆರ್ಥಿಕ ಸಬಲೀಕರಣವನ್ನು ಸಾಧಿಸಲು ನೆರವು ನೀಡಿದೆ.

ಕೇರಳದ ಶ್ರೀ ವರ್ಗೀಸ್ ಹಾಗೂ ಬಿಹಾರದ ಶ್ರೀಮತಿ ನಿಶಾ ದೇವಿ ಅವರಂತಹ ವಿನೂತನ ವಿಧಾನವನ್ನು ಪ್ರಯತ್ನಿಸುವ ಅನೇಕ ರೈತರು ತಮ್ಮ ಜಮೀನಿನಲ್ಲಿ ಹಲವು ಹೊಸ ತಂತ್ರಗಳನ್ನು ಬಳಸಲು ಯತ್ನಿಸುತ್ತಿದ್ದಾರೆ. ಜೊತೆಗೆ, ತಮ್ಮ ಸಹ ರೈತರೊಂದಿಗೆ ಪರಿಸರ ಸ್ನೇಹಿ ವಿಧಾನದಲ್ಲಿ ಆಹಾರವನ್ನು ಬೆಳೆಯುವ ಬಗ್ಗೆ ತಮ್ಮ ಜ್ಞಾನ ಮತ್ತು ಅನುಭವವನ್ನು ಹಂಚಿಕೊಳ್ಳುತ್ತಿದ್ದಾರೆ. ಅವರು ಆಧುನಿಕ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮವನ್ನು ಒಗ್ಗೂಡಿಸಿಕೊಂಡು ಇತರರಿಗೆ ಶಿಕ್ಷಣ ನೀಡುತ್ತಿದ್ದಾರೆ. ಅದರ ಮೂಲಕ ಕೃಷಿಯಲ್ಲಿ ಆಸಕ್ತಿ ಹೊಂದಿರುವ ಹೆಚ್ಚಿನ ಸಂಖ್ಯೆಯ ಜನರನ್ನು ತಲುಪುತ್ತಿದ್ದಾರೆ. ಕಲಿಕೆಯಲ್ಲಿ ರೇಖೀಯ ವಿಧಾನದಿಂದ ಆವರ್ತಕ ವಿಧಾನದ ಕಲಿಕೆಯ ಕಡೆಗೆ ಹೋಗಬೇಕಾದ ಅಗತ್ಯವನ್ನು ಕುರಿತಾದ ಲೇಖವನ್ನು ಈ ಸಂಚಿಕೆಯಲ್ಲಿ ಸೇರಿಸಲಾಗಿದೆ. ಕೃಷಿ ಪರಿಸರಶಾಸ್ತ್ರ ಶಿಕ್ಷಣದಲ್ಲಿ, ವಿದ್ಯಾರ್ಥಿಗಳು ವ್ಯವಸ್ಥಿತ ಚಿಂತನೆಯತ್ತ ಸಾಗಬೇಕು ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಪ್ರಮುಖ ಸಾಮರ್ಥ್ಯಗಳನ್ನು ರೂಪಿಸಿಕೊಳ್ಳಬೇಕು.

ಈ ಸಂಚಿಕೆ ನಿಮಗೆ ಇಷ್ಟವಾಗುತ್ತದೆಯೆಂದು ಭಾವಿಸಿದ್ದೇವೆ. ನಿಮ್ಮ ಪ್ರತಿಕ್ರಿಯೆಗಳಿಗಾಗಿ ಕಾದಿರುತ್ತೇವೆ.

ಸಂಪಾದಕರು.

## ಲೀಸಾ LEISA www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ. ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ – ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ – ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ. ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

## ಎ ಎಂ ಇ ಪ್ರತಿಷ್ಠಾನ www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ, ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ತಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.


**ವಿಶ್ವಸ್ಥರು**
**ಚೇರ್ಮನ್** : ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.,)
**ವೈಸ್ ಚೇರ್ಮನ್** : ಡಾ. ಸ್ಮಿತಾ ಪ್ರೇಮಚಂದರ್
**ಖಜಾಂಚಿ** : ಡಾ. ಎನ್.ಜಿ.ಹೆಗಡೆ,
**ಸದಸ್ಯರು** : ಶ್ರೀ ಅಶೋಕ್ ಚಟರ್ಜಿ, ಶ್ರೀಮತಿ ರೇಣುಕಾ ಚಿದಂಬರಂ

**ಕಾರ್ಯಕಾರಿ ನಿರ್ದೇಶಕರು:** ಶ್ರೀಮತಿ ಟಿ.ಎಂ.ರಾಧ


## ಮಿಸೆರಿಯೊರ್ MISEREOR www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್–ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ




## ಕೃಷಿಪರಿಸರಶಾಸ್ತ್ರ ಶಿಕ್ಷಣ: ಶಿಕ್ಷಣಶಾಸ್ತ್ರ ಮತ್ತು ಅಭ್ಯಾಸ

■ ಅಂಶುಮನ್ ದಾಸ್

ಕಲಿಕೆಯಲ್ಲಿ ರೇಖಾತ್ಮಕ ವಿಧಾನದಿಂದ ಆವರ್ತಕ ವಿಧಾನದ ಕಡೆಗೆ ಬದಲಾಗುವ ಅವಶ್ಯಕತೆಯಿದೆ. ವಿದ್ಯಾರ್ಥಿಗಳು ವ್ಯವಸ್ಥಿತ ಚಿಂತನೆಯತ್ತ ಸಾಗಿದಾಗ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಮುಖ್ಯವಾದ ಸಾಮರ್ಥ್ಯಗಳನ್ನು ರೂಪಿಸಿಕೊಂಡಾಗ ಸಂಭವಿಸುತ್ತದೆ. ಇದು ಕಲಿಕೆಗೆ ಸಹಾಯಮಾಡುತ್ತದೆ ಮತ್ತು ಇದನ್ನು ಕಲಿಸಲಾಗುವುದಿಲ್ಲ.

**4**



## ಪ್ರವಾಹ ಪೀಡಿತ ಸಮುದಾಯಗಳ ಸಹಿಷ್ಣುತೆಯ ಗುಣವನ್ನು ಹೆಚ್ಚಿಸುವುದು

■ ಅರ್ಚನಾ ಶ್ರೀವಾಸ್ತವ ಮತ್ತು ಬಿಜಯ್ ಪ್ರಕಾಶ್

ಪ್ರವಾಹ ಬಂದು ಹೂಳು ತುಂಬಿದಾಗ ಕೃಷಿ ಮಾಡುವುದು ಸವಾಲಾಗಿ ಪರಿಣಮಿಸುತ್ತದೆ. ಇದು ರೈತರ ಬದುಕು ಮತ್ತು ಹವಾಮಾನ ಎರಡನ್ನೂ ದುರ್ಬಲಗೊಳಿಸುತ್ತದೆ.

**8**



## ವರ್ಟಿಕಲ್ ಗಾರ್ಡಿನಿಂಗ್‌ನ ಹೊಸ ಹಾದಿಗಳು

■ ಅರ್ಚನ ಭಟ್, ವಿಪಿನ್‌ದಾಸ್ ಪಿ ಮತ್ತು ಅಬ್ದುಲ್ಲ ಹಬೀಬ್

ಹೊಸ ಮಾದರಿಯು ಸ್ಫೂರ್ತಿದಾಯಕವಾಗಿದ್ದು, ಮರುಬಳಕೆಯ ಅರಿವು ಮತ್ತು ಹೊಸತನವನ್ನು ಹುಡುಕುವ ರೈತ ಅನ್ವೇಷಕರಿಗೆ, ಮಹತ್ವಾಕಾಂಕ್ಷಿ ನಗರ ಕೃಷಿಕರಿಗೆ ಅನುಕರಣೀಯ ಮಾದರಿಯಾಗಿದೆ.

**11**



## ಸುಸ್ಥಿರ ಕೃಷಿಗಾಗಿ ಸೌರ ಶಕ್ತಿಯ ಮಾದರಿಗಳು

■ ಅರುಣಕುಮಾರ ಶಿವರಾಯ್

ಬೆಳೆಗಳ ಬೆಳವಣಿಗೆಯ ನಿರ್ಣಾಯಕ ಹಂತಗಳಲ್ಲಿ ಬೆಳೆಗಳಿಗೆ ಅಗತ್ಯವಿರುವಷ್ಟು ನೀರನ್ನು ಸಮಯಕ್ಕೆ ಸರಿಯಾಗಿ ಒದಗಿಸುವುದು ಅತ್ಯಗತ್ಯ. ಇದು ಸುಧಾರಿತ ಕೃಷಿ ಉತ್ಪಾದಕತೆ ಮತ್ತು ಆದಾಯವನ್ನು ಖಾತ್ರಿಗೊಳಿಸುತ್ತದೆ. ಹೀಗಿದ್ದೂ, ಪೂರ್ವಾಪೇಕ್ಷಿತ ವಿಶ್ವಾಸಾರ್ಹ ಶಕ್ತಿ ಆಧಾರಿತ ವ್ಯವಸ್ಥೆಯು ನೀರನ್ನು ಸಮಯಕ್ಕೆ ಸರಿಯಾಗಿ ಹೊರತೆಗೆಯಲು ಮತ್ತು ವಿತರಿಸಲು ನೆರವಾಗುತ್ತದೆ. ಸೌರ ಶಕ್ತಿಯ ಮಾದರಿಗಳು ಇದಕ್ಕೆ ಹಾದಿಯಾಗಿವೆ.

**14**



## ಸಣ್ಣ ಉದ್ಯಮಗಳ ಮೂಲಕ ಗ್ರಾಮೀಣ ಮಹಿಳೆಯರಲ್ಲಿ ಆರ್ಥಿಕ ಕ್ರಾಂತಿ

■ ಮಾಧುರಿ ರೇವಣವರ್

ಬಹುತೇಕ ಗ್ರಾಮೀಣ ಮಹಿಳೆಯರು ಭೂರಹಿತರು. ಅವರು ಹೊಲದಲ್ಲಿ ಕೂಲಿಯಾಳುಗಳಾಗಿ ದುಡಿಯುತ್ತಾರೆ. ಸಂಸ್ಕೃತಿ ಸಂವರ್ಧನ ಮಂಡಲ, ಎನ್ನುವ ಎನ್‌ಜಿಒ ಮಹಾರಾಷ್ಟ್ರದ ಸಗೋರ್ಲಿಯದ ಮಹಿಳೆಯರಿಗೆ ಅವರ ಉದ್ಯಮಗಳನ್ನು ನಡೆಸಲು ಸಾಲ ನೀಡುವ ಮೂಲಕ ಅವರು ಆರ್ಥಿಕವಾಗಿ ಸಬಲರಾಗಲು ಸಹಾಯ ನೀಡಿತು.

**18**

# ಕೃಷಿಪರಿಸರಶಾಸ್ತ್ರ ಶಿಕ್ಷಣ: ಶಿಕ್ಷಣಶಾಸ್ತ್ರ ಮತ್ತು ಅಭ್ಯಾಸ

**ಅಂಶುಮನ್ ದಾಸ್**

**ಕಲಿಕೆಯಲ್ಲಿ ರೇಖಾತ್ಮಕ ವಿಧಾನದಿಂದ ಆವರ್ತಕ ವಿಧಾನದ ಕಡೆಗೆ ಬದಲಾಗುವ ಅವಶ್ಯಕತೆಯಿದೆ. ವಿದ್ಯಾರ್ಥಿಗಳು ವ್ಯವಸ್ಥಿತ ಚಿಂತನೆಯತ್ತ ಸಾಗಿದಾಗ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಮುಖ್ಯವಾದ ಸಾಮರ್ಥ್ಯಗಳನ್ನು ರೂಪಿಸಿಕೊಂಡಾಗ ಸಂಭವಿಸುತ್ತದೆ. ಇದು ಕಲಿಕೆಗೆ ಸಹಾಯಮಾಡುತ್ತದೆ ಮತ್ತು ಇದನ್ನು ಕಲಿಸಲಾಗುವುದಿಲ್ಲ.**

ನಮ್ಮ ಕೃಷಿ ಶಿಕ್ಷಣವು ಇನ್ನೂ ರೈತರನ್ನು ಹೊರಗಿನ ಮಧ್ಯಸ್ಥಗಾರರಂತೆ ಕಾಣುತ್ತದೆ. ನಾವು 'ಅವರಲ್ಲಿಗೆ ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹೋಗುತ್ತೇವೆ ಮತ್ತು ಪರಿಹಾರವನ್ನು ಸೂಚಿಸುತ್ತವೆ.' ಈ ವಾಕ್ಯವನ್ನು ಪ್ರಖ್ಯಾತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಮುಂದೆ ಹೇಳಿದಾಗ, ನಾನು ಇದರ ಮೂಲಕ ಏನನ್ನು ಹೇಳಬಯಸಿದ್ದೆನೋ ಅದನ್ನು ಹೇಳಲಾಗಿಲ್ಲ ಎನ್ನುವುದು ಅರ್ಥವಾಯಿತು. ಅವರು ತಮ್ಮನ್ನು, ನಾನು ನನ್ನ ಅವಲೋಕನವನ್ನು ಸಮರ್ಥಿಸಿಕೊಳ್ಳುವಂತಹ ಹಲವು ಪ್ರತಿಕ್ರಿಯೆಗಳು ಅತ್ತಲಿಂದ ಇತ್ತ ಹಾರಾಡಿದವು.

ಕಳೆದ 7 ವರ್ಷಗಳಿಂದ ಸಂಶೋಧಕರು, ಕಾರ್ಯಕರ್ತರು ಮತ್ತು ಸಾಧಕರಿಗೆ ಕೃಷಿಪರಿಸರ ಶಾಸ್ತ್ರದ ಸರ್ಟಿಫಿಕೇಟ್ ಕೋರ್ಸ್ ನಡೆಸಿದ್ದೇವೆ. ಭಾರತದ 15 ರಾಜ್ಯಗಳು ಮತ್ತು 4 ಬೇರೆ ದೇಶಗಳಿಂದ ಸುಮಾರು 170 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಭಾರತದಲ್ಲಿ ಮುಖ್ಯವಾಹಿನಿಯ ಶಿಕ್ಷಣ ವ್ಯವಸ್ಥೆಯಲ್ಲಿ ಕೃಷಿಪರಿಸರ ಶಾಸ್ತ್ರವು ಹೊಸದಾಗಿ ಸೇರ್ಪಡೆಯಾದ ವಿಷಯವಾಗಿತ್ತು. ಕೃಷಿವಿಜ್ಞಾನದ ವಿಧಾನಗಳು ಬಹಳ ಹಿಂದಿನಿಂದಲೂ 'ರೂಢಿಯಲ್ಲಿದ್ದರೂ' – ಅದರ ವಿಜ್ಞಾನವು ಸಾಕಷ್ಟು ಹೊಸದಾಗಿದ್ದು ಈ ಚಳುವಳಿಯೂ ಹೊಸದಾಗಿತ್ತು. ಭಾರತದಲ್ಲಿ ರೈತ ಚಳುವಳಿಗಳು, ರೈತ ಹೋರಾಟಗಳಿದ್ದವು. ಬಹುತೇಕ ಅವು ಆರ್ಥಿಕ ಸಮಸ್ಯೆಗಳು, ಭೂಮಿ ಹಕ್ಕು ಮತ್ತು ಅರಣ್ಯ ಹಕ್ಕುಗಳ ಸುತ್ತ ಇದ್ದವು. ಪ್ರಸ್ತುತ ರೈತ ಹೋರಾಟ ಕೂಡ ಮಾರುಕಟ್ಟೆ ಸಮಸ್ಯೆಗಳ ಸುತ್ತಲೇ ನಡೆಯುತ್ತಿದೆ. ಕೃಷಿ ವಿಜ್ಞಾನದ ಕಲಿಕೆಯು ಸಾವಯವ ಕೃಷಿ ಅಥವಾ ಸುಸ್ಥಿರ ಕೃಷಿ ಕೋರ್ಸ್‌ನ ಅರ್ಥ ಮತ್ತು ನಿರೀಕ್ಷೆಯನ್ನು ಸೂಚಿಸುತ್ತಿದೆ.

ಕೋರ್ಸ್‌ನ ಆರಂಭಿಕ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಇದು ಮುಕ್ತ ಪ್ರಶ್ನೆಗಳೊಂದಿಗೆ ವ್ಯವಹರಿಸುತ್ತದೆ ಎಂದು ಅರ್ಥಮಾಡಿಕೊಳ್ಳುವುದು ಸವಾಲಿನ ವಿಷಯವಾಗಿದೆ. ಅಲ್ಲಿ ವಿದ್ಯಾರ್ಥಿಗಳು ಪೂರ್ವ ನಿಗದಿತ ಮಾಹಿತಿಗಳಿಗಿಂತ ನೈಜ ವಿದ್ಯಮಾನಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಕಲಿಯುತ್ತಾರೆ.

ವಿದ್ಯಾರ್ಥಿಗಳು ಆರಂಭಿಕ ಹಂತದಲ್ಲಿ ಹೆಚ್ಚಾಗಿ ಸಾವಯವ ಕೃಷಿಯ ತಂತ್ರಗಳನ್ನು ಕಲಿಯುವ ನಿರೀಕ್ಷೆ ಇಟ್ಟುಕೊಂಡಿರುತ್ತಾರೆ. ತಂತ್ರಜ್ಞಾನವನ್ನು ಅತಿಯಾಗಿ ಅವಲಂಬಿಸಿರುವುದರಿಂದ ಅದೇ ಸವಾಲನ್ನು ನಿಭಾಯಿಸುವ ಸರಳವಾದ ವಿಧಾನವಾಗಿದೆ.



**ವಿದ್ಯಾರ್ಥಿಗಳು ರೈತರೊಂದಿಗೆ ಕೆಲಸ ಮಾಡುತ್ತಿರುವುದು**

ಕಾಲಕಳೆದಂತೆ ವಿಜ್ಞಾನ ಮತ್ತು ತಂತ್ರಜ್ಞಾನದ ನಡುವಿನ ವಿಭಜನೆಯು ಮರೆಯಾಗುತ್ತಿದೆ. ಆಧುನಿಕ ವಿಜ್ಞಾನವು ಸರಳ ಹಾಗೂ ಮಿತಕಾರಿಯಾಗಿದೆ. ಅದು ತ್ವರಿತ ಸಲಹೆಗಳನ್ನು ನೀಡುತ್ತಿದ್ದು ಅದು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೂ, ಕೃಷಿಯಲ್ಲೂ ಕಾಣಿಸಿಕೊಳ್ಳುತ್ತಿದೆ. ಒಂದು ಕೀಟಕ್ಕೆ ಒಂದು ಕೀಟನಾಶಕ, ಅಂತಹ ಮಿತವಾದದ ಅದ್ಭುತ ಉದಾಹರಣೆಯಾಗಿದೆ. ಸಾಂಪ್ರದಾಯಿಕ ಒಳಸುರಿಯುವಿಕೆಯ ಕೃಷಿಗೆ ಪರ್ಯಾಯಗಳು ಎಂದು ಹೇಳಲಾಗುವ ಬದಲಿ ಕ್ರಮಗಳು ಕೂಡ ಮಾಹಿತಿ ಆಧಾರಿತ ತಂತ್ರಜ್ಞಾನಗಳನ್ನು ಅವಲಂಬಿಸಿದೆ. ಬೀಜಾಮೃತ, ಜೀವಾಮೃತ, ಮುಚ್ಚುಗೆ ಬ್ರಹ್ಮಾಸ್ತ್ರ. ಇದು ವಿಭಿನ್ನ ಚರ್ಚೆಯ ಕ್ಷೇತ್ರವಾಗಿದೆ – ಆದರೆ ತಂತ್ರಜ್ಞಾನ ಆಧಾರಿತ ವಿಧಾನದ(ಟೆಕ್ನೋ-ಫಿಕ್ಸಿಂಗ್) ಮೇಲಿನ ಅತಿಯಾದ ಬಳಕೆಯು ನಮ್ಮ ಕೃಷಿ ಶಿಕ್ಷಣ ವ್ಯವಸ್ಥೆಗೆ ಅನುಕೂಲಕರವಾಗಿದೆ.

## ಇದು ಯಾವುದರ ಕುರಿತು?

ಹೀಗಿದ್ದೂ, ಸಾಂಪ್ರದಾಯಿಕ ಕೃಷಿಯಿಂದ ಕೃಷಿವಿಜ್ಞಾನ ಎನ್ನುವುದು ಕೇವಲ ಬದಲಿ ವಿಧಾನವಾಗಿಲ್ಲ ಎಂಬುದು ವಿದ್ಯಾರ್ಥಿಗಳಿಗೆ ಅರ್ಥವಾಗಲು ಸ್ವಲ್ಪ ಸಮಯ ಹಿಡಿಯಿತು. ಉತ್ಪಾದಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯಂತಹ ಕೃಷಿಪರಿಸರ ವ್ಯವಸ್ಥೆಗಳ ನಿರ್ವಹಣೆ ಮಾಡುವುದು ಮತ್ತು ಅವುಗಳನ್ನು ಹೇಗೆ ಅಭ್ಯಾಸ ಮಾಡಬೇಕು ಹೇಗೆ ವಿನ್ಯಾಸಗೊಳಿಸಬೇಕು ಎನ್ನುವುದರ ಚೌಕಟ್ಟನ್ನು ರೂಪಿಸುವುದು ಈ ಕೋರ್ಸ್ ಎಂದು ಅವರಿಗೆ ಕ್ರಮೇಣ ಅರ್ಥವಾಯಿತು. ಕೃಷಿಪರಿಸರ ಸಿದ್ಧಾಂತಗಳನ್ನು ಬೋಧಿಸುವುದಕ್ಕಿಂತ ಕೃಷಿವಿಜ್ಞಾನಿಗಳನ್ನು ರೂಪಿಸುವುದರ ಕಡೆಗೆ ಹೆಚ್ಚಿನ ಗಮನಹರಿಸಿದ್ದರಿಂದ ವಿದ್ಯಾರ್ಥಿಗಳು ನೈಜ ಜೀವನ ಪರಿಸ್ಥಿತಿಗಳು ಹಾಗೂ ವಿದ್ಯಮಾನಗಳಿಗೆ ತೆರೆದುಕೊಂಡರು. ಸರಳವಾದ ದೃಷ್ಟಿಕೋನಕ್ಕೆ ಹೋಲಿಸಿದರೆ, ಕೃಷಿ ವ್ಯವಸ್ಥೆ, ನೈಸರ್ಗಿಕ ಪರಿಸರ ವ್ಯವಸ್ಥೆ, ಆಹಾರ ವ್ಯವಸ್ಥೆ, ಮಾರುಕಟ್ಟೆ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಯಂತಹ ವಿವಿಧ ವ್ಯವಸ್ಥೆಗಳು ಪರಸ್ಪರ ಬೀರುವ ಪರಿಣಾಮದಿಂದ ಯಾವುದೇ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಇದು ಅವಕಾಶವನ್ನು ಕಲ್ಪಿಸಿದೆ.

ಪರಿಣಾಮಾತ್ಮಕ ಕ್ರಿಯೆಯ ಪರ್ಯಾಲೋಚನೆ ಆಧಾರಿತ ಶಿಕ್ಷಣಶಾಸ್ತ್ರದ ಮೇಲೆ ಕೇಂದ್ರಿತವಾದ ಕೋರ್ಸಿನಲ್ಲಿ ರೇಖಾತ್ಮಕ ವಿಧಾನದಿಂದ ಆವರ್ತಕ ವಿಧಾನಕ್ಕೆ ಮಾದರಿ ಬದಲಾವಣೆಯಾಯಿತು. ಕಲ್ಪಿತ ಸಿದ್ಧಾಂತವು ಸಕ್ರಿಯ, ಸಾಮಾಜಿಕ ಕಲಿಕೆಯ ಸಂಕೀರ್ಣ ವಾಸ್ತವತೆಯು ಈ ಮಾರ್ಗದ ಆರಂಭ ಬಿಂದುವಾಗಿದೆ. ಸಾಂಪ್ರದಾಯಿಕ ಸಿದ್ಧಾಂತ ಆಧಾರಿತ ಕಾರ್ಯತಂತ್ರಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿದೆ ಮತ್ತು ಸಂಕೀರ್ಣವಾದ ಸುಸ್ಥಿರತೆಯ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಮತ್ತು ನಿರ್ವಹಿಸಲು ಹೆಚ್ಚು ಸೂಕ್ತವಾಗಿದೆ. ಕ್ರಿಯಾಶೀಲ ಕಲಿಕೆಯು ತರಗತಿಯ ಹೊರಗೆ ಸಂಕೀರ್ಣ ಜಗತ್ತಿನಲ್ಲಿ ನಡೆಯುತ್ತದೆ. ಆದ್ದರಿಂದ ಕಲಿಕೆಯ ಪ್ರತಿ ಅಂಶವು ನಿಜಬದುಕಿನ ಅನುಭವವು ಅದರ ಪರ್ಯಾಲೋಚನೆ ಮತ್ತು ಆ ವಿಷಯದ ಕುರಿತಾದ ಸಿದ್ಧಾಂತದೊಂದಿಗೆ ಆರಂಭವಾಗುತ್ತದೆ. ಕ್ಷೇತದ ಕೆಲಸಗಳಲ್ಲಿ ತೊಡಗಿಸಿಕೊಂಡು ಅಲ್ಲಿನ ಸವಾಲುಗಳನ್ನು ಕಂಡುಹಿಡಿಯುವುದು ಮತ್ತು ಅದರ ಪರಿಹಾರಗಳನ್ನು ಅಭಿವೃದ್ಧಿಪಡಿಸುವುದು. ಮಾದರಿ ಕ್ಷೇತ್ರದಲ್ಲಿ ಕಲಿಕೆಯು ಆರಂಭವಾಗುತ್ತದೆ ಮತ್ತು ಅನುಭವವನ್ನು ಹೆಚ್ಚಿನ ಜನರೊಂದಿಗೆ ಹಂಚಿಕೊಳ್ಳುವುದರೊಂದಿಗೆ ಕೊನೆಗೊಳ್ಳುತ್ತದೆ. ಆವರ್ತಕ ವಿಧಾನದ ಮೂಲಕ ವಿದ್ಯಾರ್ಥಿಗಳು ಮೊದಲು ನೈಜ ಜೀವನದ ವಿದ್ಯಮಾನಗಳು ಅಥವಾ ಕ್ರಿಯೆಗೆ ತೆರೆದುಕೊಳ್ಳುವ ಮೂಲಕ ಕಲಿಯುತ್ತಾರೆ. ಪಡೆದುಕೊಂಡ ತಿಳಿವಳಿಕೆಯನ್ನು ಪರ್ಯಾಲೋಚಿಸುತ್ತಾರೆ ಮತ್ತು ಮುಂದಿನ ಕ್ರಿಯಾಶೀಲ ಆವರ್ತನವನ್ನು ಕೆಳಗಿನ ಚಿತ್ರದಲ್ಲಿ ವಿವರಿಸಲಾಗಿದೆ.

ಕೃಷಿ ಶಿಕ್ಷಣದಲ್ಲಿ, ರೈತರು ಯಾವಾಗಲೂ ವಿಸ್ತರಣಾ ವ್ಯವಸ್ಥೆಯಿಂದ ಜ್ಞಾನವನ್ನು ಸ್ವೀಕರಿಸುವವರಾಗಿ ಉಳಿಯುತ್ತಾರೆ – ಕೃಷಿಕನಿಗೆ ಹೇಗೆ ಕೃಷಿ ಮಾಡಬೇಕೆಂದು ಕಲಿಸಲು ಎಲ್ಲರೂ ಅಲ್ಲಿರುತ್ತಾರೆ! ಕೇವಲ ಮಾಹಿತಿ ಸಂಗ್ರಹಣೆ ಅಥವಾ ತಂತ್ರಜ್ಞಾನ ರೂಪಾಂತರಕ್ಕೆ ವಿರುದ್ಧವಾಗಿ, ರೈತರು ಮತ್ತು ಇತರ ವೃತ್ತಿಪರರು ಜ್ಞಾನ ಕೇಂದ್ರವಾಗಿ ಈ ಕೋರ್ಸ್‌ನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ವಿದ್ಯಾರ್ಥಿಗಳು ಕೋರ್ಸಿನುದ್ದಕ್ಕೂ ರೈತರೊಂದಿಗೆ ಹಲವು ಬಾರಿ ಸಂವಾದ ನಡೆಸುತ್ತಾರೆ. ಅವರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಅವರೊಂದಿಗೆ ಇರುತ್ತಾರೆ. ಆರಂಭದಲ್ಲಿ ವಿದ್ಯಾರ್ಥಿಗಳು ಕೃಷಿ ಯೋಜನೆ, ತಂತ್ರಗಳು, ಪದ್ಧತಿಗಳು, ಮಾರುಕಟ್ಟೆಯೊಂದಿಗೆ ಸಂವಹನ ಇತ್ಯಾದಿಗಳ ಬಗ್ಗೆ ಕಲಿಯಲು ಸುಸ್ಥಾಪಿತ ಪರಿಸರ ಫಾರ್ಮ್‌ಗಳಲ್ಲಿ ಆಯೋಜಿಸಲಾಗುತ್ತದೆ. ಪರಸ್ಪರ ಸಂವಾದವು ಮುಕ್ತಚೌಕಟ್ಟಿನಲ್ಲಿರುತ್ತದೆ – ಇದರೊಂದಿಗೆ ರೈತರು ವಿದ್ಯಾರ್ಥಿಗಳನ್ನು ಅವರ ತೋಟದ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು, ಕೃಷಿ ಯೋಜನೆಯ ಕುರಿತು ವಿವರಿಸಲು, ಸಂಪನ್ಮೂಲ ಹರಿವು ಇತ್ಯಾದಿಗಳ ಬಗ್ಗೆ ತಿಳಿಸಿಕೊಡುವಂತೆ ರೂಪಿಸಿರಲಾಗುತ್ತದೆ. ಆ ಅನುಭವದಿಂದ ಕಲಿತು, ವಿವಿಧ ಪರಿಕರಗಳ ಮೂಲಕ ಸವಾಲುಗಳನ್ನು ಗುರುತಿಸಲು ಮತ್ತು ಪರಿಹಾರವನ್ನು ಒಗ್ಗೂಡಿ–ಅಭಿವೃದ್ಧಿಪಡಿಸಲು ವಿದ್ಯಾರ್ಥಿಗಳ ಗುಂಪನ್ನು ಒಂದು ಫಾರ್ಮ್‌ಗೆ ನಿಯೋಜಿಸಲಾಗುತ್ತದೆ. ಗುರುತಿಸಿದ ಸವಾಲುಗಳಿಗೆ ಅನುಗುಣವಾಗಿ ಪರಿಣಿತರೊಂದಿಗೆ ಆ ಕುರಿತು ತಿಳಿವಳಿಕೆ ನೀಡುವಂತಹ ಚರ್ಚೆ ಸಂವಾದಗಳು ಇರುತ್ತವೆ. ರೈತರು ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ನೀಡುತ್ತಾರೆ – ಅವರು ಕಲಿಯಲು ಎಷ್ಟು ಉತ್ಸುಕರಾಗಿದ್ದರು, ಯಾರಿಗಾದರೂ ತೋಟಗಳಲ್ಲಿ ಉಳಿಯಲು ಮತ್ತು ಕೆಲಸ ಮಾಡಲು ಯಾವುದೇ ನಿರ್ಬಂಧಗಳಿದ್ದರೆ, ತೊಡಗಿಸಿಕೊಳ್ಳುವಿಕೆ ಇತ್ಯಾದಿ. ಕೆಲವು ಸಂದರ್ಭಗಳಲ್ಲಿ, ವಿದ್ಯಾರ್ಥಿಗಳು ಆಹಾರ ಸಂಸ್ಕಾರಕರು, ಬೀಜ ಬೆಳೆಗಾರರೊಂದಿಗೆ ಕೆಲಸ ಮಾಡಿದರು.



**ವಿಷಯ**

**ಸ್ಥೂಲ ಸಂಗತಿಗಳು**

- ವ್ಯವಸ್ಥೆಗಳು ಮತ್ತು ಶಿಸ್ತುಬದ್ಧ ಚಿಂತನೆ
- ಆಹಾರ ಮತ್ತು ಕೃಷಿ ವ್ಯವಸ್ಥೆಯ ಇತಿಹಾಸ ಮತ್ತು ರಾಜಕೀಯ
- ಸುಸ್ಥಿರತೆ
- ಪರಿಸರ ಮತ್ತು ಕೃಷಿಯ ಮೂಲಭೂತ ಅಂಶಗಳು
- ಮುಖ್ಯ ಸಮಸ್ಯೆಗಳು– ಪೌಷ್ಟಿಕತೆ, ಲಿಂಗ
- ಮಾರಾಟ ಮತ್ತು ಮಾರುಕಟ್ಟೆ
- ಕಲಿಕಾ ಸಲಕರಣೆಗಳು ಮತ್ತು ಸಂಪನ್ಮೂಲ ಮೌಲ್ಯಮಾಪನ

**ಕೃಷಿ ವ್ಯವಸ್ಥೆಯ ಸೂಕ್ಷ್ಮ ವಿವರಗಳು**

- ನೈಸರ್ಗಿಕ ಕೃಷಿಯ ತತ್ವಗಳು
- ಪರ್ಮಾಕಲ್ಚರ್
- ಬೀಜ
- NPM
- ಜಾನುವಾರು ಮತ್ತು ಕೋಳಿಸಾಕಣೆ
- ಕೃಷಿ ತಂತ್ರಗಳು
- ಪ್ರಮಾಣೀಕರಣ
- ಜಲಾನಯನ ತತ್ವಗಳು
- ಮೌಲ್ಯದ ಸರಪಳಿ

**ದೂರದೃಷ್ಟಿ ನಿರ್ಮಾಣ**

- ದೂರದೃಷ್ಟಿ ನಿರ್ಮಾಣ
- ದೇಸಿ ಆಹಾರ ವ್ಯವಸ್ಥೆ
- ಹವಾಮಾನ ಮತ್ತು DRR ಅನ್ನು ಅರ್ಥಮಾಡಿಕೊಳ್ಳುವುದು
- ಬದಲಾವಣೆಯ ನಿರ್ಮಾತೃಗಳಾಗಿ ಸಂವಹನ

## ತಿಳಿವಳಿಕೆಯಿಂದ ಮುಖ್ಯ ಸಾಮರ್ಥ್ಯಗಳವರೆಗೆ

ಈ ಕೋರ್ಸ್ ಕೃಷಿವಿಜ್ಞಾನವನ್ನು ಬೋಧಿಸುವುದಕ್ಕಿಂತ ಹೆಚ್ಚಾಗಿ ಕೃಷಿವಿಜ್ಞಾನಿಗಳನ್ನು ಅಭಿವೃದ್ಧಿ ಪಡಿಸುವುದರ ಕಡೆಗೆ ಗಮನಕೇಂದ್ರೀಕರಿಸುವುದರಿಂದ ವಿಷಯಕ್ಕಿಂತ ವಿದ್ಯಾರ್ಥಿಗಳ ಕಡೆ ಹೆಚ್ಚು ಗಮನನೀಡಲಾಗಿದೆ. ಪ್ರಪಂಚವನ್ನು ಹೇಗೆ ನೋಡಲು ಕಲಿಯುತ್ತೇವೋ ಅದು ನಮ್ಮ ಭವಿಷ್ಯದ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ, ನಮ್ಮ ಭವಿಷ್ಯದ ಕ್ರಿಯೆಗಳಲ್ಲಿ ಹೆಚ್ಚಿನ ಸುಸ್ಥಿರತೆಯನ್ನು ತರುವ ಗುರಿಯನ್ನು ಹೊಂದಿದ್ದಲ್ಲಿ, ಶಿಕ್ಷಣದ ಬಗ್ಗೆ ಮರುಚಿಂತನೆ ಮತ್ತು ಶಿಕ್ಷಣದಲ್ಲಿ ಸೈದ್ಧಾಂತಿಕ ಜ್ಞಾನಕ್ಕೆ ಮಾತ್ರ ಒತ್ತು ನೀಡುವ ಬದಲು ಅನುಭವದಿಂದ ಸಾಮರ್ಥ್ಯಗಳನ್ನು ಕಂಡುಕೊಳ್ಳುವುದನ್ನು ತುರ್ತಾಗಿ ಮಾಡಬೇಕಿದೆ. ಕೃಷಿ ಕ್ಷೇತ್ರದಲ್ಲಿನ ಮುಂದಿನ ಪೀಳಿಗೆಯ ವೃತ್ತಿಪರರು ತಮ್ಮ ಶೈಕ್ಷಣಿಕ ಮತ್ತು ಕ್ಷೇತ್ರ ಅಧ್ಯಯನಗಳ ಮೂಲಕ ಮತ್ತು ಚಟುವಟಿಕೆಗಳ ಮೂಲಕ ವೃತ್ತಿಪರ ಸ್ಥಾನಕ್ಕೆ ತಕ್ಕ ಕೆಲವು ಮುಖ್ಯ ಅಂಶಗಳನ್ನು ಕಲಿತು ಅಭ್ಯಸಿಸಬೇಕಾಗುತ್ತದೆ.

ಇದರರ್ಥ ವಿದ್ಯಾರ್ಥಿಗಳು ಪದ್ಧತಿಗಳನ್ನು ಗಮನಿಸಬೇಕು, ಅವುಗಳಲ್ಲಿ ಭಾಗವಹಿಸಬೇಕು, ಪಾಲುದಾರರೊಂದಿಗೆ ಮಾತುಕತೆ ನಡೆಸಬೇಕು ಮತ್ತು ಭಾಗವಹಿಸುವಿಕೆ ಮತ್ತು ಗಮನಿಸುವಿಕೆಯ ಅನುಭವದ ಮೂಲಕ ಕೃಷಿ ಜ್ಞಾನವನ್ನು ಪಡೆಯಬೇಕು ಹಾಗೂ ಪರ್ಯಾಲೋಚನಾ ಚಟುವಟಿಕೆಗಳ ಮೂಲಕ ಆಹಾರ ವ್ಯವಸ್ಥೆಗಳ ಬಗ್ಗೆ ಅರಿಯಬೇಕು.

## ಬೋಧನೆಯಿಂದ ಸುಗಮಕಾರರರಾಗುವತ್ತ

ಪ್ರಸ್ತುತದಲ್ಲಿನ ಜ್ಞಾನ ಗಳಿಕೆಯ ವ್ಯವಸ್ಥೆಯಲ್ಲಿ ಶಿಕ್ಷಕರು ಜ್ಞಾನದ 'ಮಾಲೀಕ' ಮತ್ತು 'ಕೊಡುವವನು', ಅವರು ವಿದ್ಯಾರ್ಥಿಗಳ ಖಾಲಿ ಮೆದುಳನ್ನು ತುಂಬುತ್ತಾರೆ. ಜ್ಞಾನವು ಶಿಕ್ಷಕರಿಂದ ವಿದ್ಯಾರ್ಥಿಗಳ ಕಡೆ ಸಾಗುತ್ತದೆಯೇ ಹೊರತು ಬೇರೆ ರೀತಿಯಲ್ಲಾಗಲಿ ಅಥವಾ ಕಲಿಕಾರ್ಥಿಗಳ ನಡುವೆಯೂ ಅಲ್ಲ. 'ಜ್ಞಾನವು ವಿಕಸನಗೊಳ್ಳುತ್ತದೆ' ಎಂದು ಅನಿಶ್ಚತತೆಯಲ್ಲಿ ಬಿಡುವುದಕ್ಕಿಂತ ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ಬಿತ್ತುವುದು ಸೂಕ್ತ. ಶಿಕ್ಷಕರಿಂದ ಸುಗಮಕಾರರಾಗುವುದನ್ನು ಸದ್ಯಕ್ಕೆ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಕೋರ್ಸಿನಲ್ಲಿ ಶಿಕ್ಷಕರಿಗೆ ಸುಗಮಕಾರರಾಗುವಂತೆ ವಿನಂತಿಸಿಕೊಳ್ಳಲಾಯಿತು. ಈ ಪಾತ್ರ ಬದಲಾವಣೆಯನ್ನು ಒಪ್ಪಿಕೊಳ್ಳುವುದು ಹಲವರಿಗೆ ಅದರಲ್ಲಿಯೂ



ವಿದ್ಯಾರ್ಥಿಗಳು ಜಮೀನಿನಲ್ಲಿ ಕೆಲಸ ಮಾಡುತ್ತಿರುವುದು

ಪ್ರೊಫೆಸರ್‌ಗಳಿಗೆ ಸುಲಭವಾಗಲಿಲ್ಲ. ಸುಗಮಗೊಳಿಸುವಿಕೆಯು ಉನ್ನತ ಮಟ್ಟದ ಕಾರ್ಯ ಇದರಲ್ಲಿ ಶಿಕ್ಷಕರು ಕಾರ್ಯವನ್ನು ವಿನ್ಯಾಸಗೊಳಿಸಬೇಕು, ಕಾರ್ಯವನ್ನು ನಿಯೋಜಿಸಬೇಕು, ಅದಕ್ಕೆ ಸೂಕ್ತ ಪರಿಕರಗಳನ್ನು ಸೃಷ್ಟಿಸಿ, ಒದಗಿಸಬೇಕು ಮತ್ತು ಪ್ರಗತಿಯನ್ನು ಪರಿಶೀಲಿಸಬೇಕು.

ಸುಗಮ ಸ್ಥಿತ್ಯಂತರವನ್ನು ಸುಲಭಗೊಳಿಸಲು, ನಾವು ಒಗ್ಗೂಡಿದ ಕಲಿಕೆ, ಸಹಕಾರಿ ಕಲಿಕೆ, ಚರ್ಚೆಗಳು, ಗುಂಪು ಯೋಜನೆಗಳು, ಪೀರ್ ಟ್ಯೂಟರಿಂಗ್, ಅನುಭವತ್ಮಾಕ ಕಲಿಕೆ, ಸಮಸ್ಯೆ ಆಧಾರಿತ ಕಲಿಕೆ, ಆಟಗಳು, ಸೃಜನಶೀಲ ಅಭಿವ್ಯಕ್ತಿಗಳು ಇತ್ಯಾದಿಗಳಿಗೆ ಅವಕಾಶವನ್ನು ಒದಗಿಸಿದ್ದೇವೆ. ಇದರಿಂದಾಗಿ ಸುಗಮಕಾರರ ಅನುಪಸ್ಥಿತಿಯಲ್ಲಿಯೂ ವಿದ್ಯಾರ್ಥಿಗಳು ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಬಹುದು, ಅಭಿಪ್ರಾಯಗಳನ್ನು ರೂಪಿಸಬಹುದು ಮತ್ತು ಜ್ಞಾನವನ್ನು ನಿರ್ಮಿಸಕೊಳ್ಳಬಹುದು. ಒಬ್ಬರದೇ ಅಭಿಪ್ರಾಯ/ಭಾಷಣಕ್ಕಿಂತ ಹೆಚ್ಚಾಗಿ, ನಾವು ಕೇಸ್ ಸ್ಟಡೀಸ್, ಅನುಕರಣೆ, ಪ್ರಸ್ತುತಿಗಳು, ಯೋಜನೆಗಳು, ಚರ್ಚೆಗಳು, ಸಂಭಾಷಣೆ ಇತ್ಯಾದಿಗಳನ್ನು ಬಳಸಿದ್ದೇವೆ. ವಿವಿಧ ಸಂವಾದಾತ್ಮಕ ವಿಧಾನಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಸ್ವತಂತ್ರ/ಸ್ವಾವಲಂಬಿಗಳಾಗಲು ಮತ್ತು ಅವರನ್ನು ಜೀವಮಾನವಿಡಿ

ಕಲಿಕಾರ್ಥಿಗಳಾಗಿ ಉಳಿಯುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.

## ಕ್ರಮಬದ್ಧ ಆಲೋಚನೆಯ ಕಡೆಗೆ

ವಿಮರ್ಶಾತ್ಮಕ ಪ್ರಶ್ನೆಗಳ ಬಗ್ಗೆ ಆಲೋಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದಕ್ಕಿಂತ ಹೆಚ್ಚಾಗಿ ಉತ್ತರಗಳನ್ನು ಹೇಳಲು ಶಿಕ್ಷಕರು ಉತ್ಸುಕರಾಗಿದ್ದಾರೆ. ಇದು ಮರಳಿ ಸರಳವಾದ ಪರಿಹಾರ ಆಧಾರಿತ ಕೃಷಿಯನ್ನು ಮತ್ತೊಮ್ಮೆ ಉಲ್ಲೇಖಿಸುತ್ತದೆ. ಕೋರ್ಸ್‌ನಲ್ಲಿ ನಾವು ಮೊದಲಿಗೆ ಸಿದ್ಧಾಂತಗಳನ್ನು ಮಾತ್ರ ಒದಗಿಸದೆ, ವಿದ್ಯಮಾನ/ಸವಾಲುಗಳೊಂದಿಗೆ ಆರಂಭಿಸಿ, ವಿದ್ಯಾರ್ಥಿಗಳು ಹಲವು ವಿಭಿನ್ನ ಆಯ್ಕೆಗಳನ್ನು ಕಂಡುಕೊಳ್ಳಲು ಅವಕಾಶ ನೀಡುವ ಮೂಲಕ ಇದನ್ನು ತರಲು ಪ್ರಯತ್ನಿಸಿದ್ದೇವೆ.

ಪರಿಸರ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಅಂತರ್‌ಶಿಸ್ತೀಯ ಆಲೋಚನಾ ವ್ಯವಸ್ಥೆ ಮತ್ತು ಅನಿಶ್ಚಿತತೆ, ಕ್ಷಿಪ್ರಬದಲಾವಣೆಯ ಯುಗದಲ್ಲಿ ಮಾಹಿತಿಪೂರ್ಣ ಕ್ರಿಯೆಯ ಅಗತ್ಯವಿರುತ್ತದೆ. ಹೀಗಿದ್ದೂ, ನಮ್ಮ ಔಪಚಾರಿಕ ಶಿಕ್ಷಣವು ವಿವಿಧ ಶಿಸ್ತುಗಳ ಜ್ಞಾನದ ಪ್ರಸರಣವನ್ನು ಆಧರಿಸಿದ್ದು, ನಿಸ್ಸಂದಿಗ್ಧವಾದ ಸತ್ಯಗಳನ್ನು ಪ್ರಸ್ತುತಪಡಿಸುತ್ತದೆ.

ಮಿತವಾದ, ರೇಖಾತ್ಮಕ, ಶಿಸ್ತೀಯ ಚಿಂತನೆಗಳು ಸರಳವಾದ ಸಂದರ್ಭಗಳಲ್ಲಿ ಪರಿಣಾಮಕಾರಿಯಾಗಿರುತ್ತದೆ. ಆದರೆ ಕೃಷಿ ಮತ್ತು ಆಹಾರ ವ್ಯವಸ್ಥೆಯಂತಹ ಸಂಕೀರ್ಣ ಸಮಸ್ಯೆಗಳನ್ನು ಎದುರಿಸುವಾಗ ಇವು ಸೂಕ್ತವಾದದ್ದಲ್ಲ ಅಥವಾ ಈ ವಿಧಾನ ಹೊಂದುವುದಿಲ್ಲ. ಶಿಸ್ತು ಆಧಾರಿತ ಚಿಂತನೆಯು ಈ ಕೋರ್ಸ್‌ನ ಪ್ರಮುಖ ಅಂಶವಾಗಿದೆ. ಇದರಲ್ಲಿ ಪರಿಸ್ಥಿತಿಯನ್ನು ಅರಿಯಲು ಬಹುದೃಷ್ಟಿಕೋನವನ್ನು ಹೊರಗಿನ ಸಂಶೋಧಕರಾಗಿ ನೋಡದೆ ಒಳಗಿನವರಾಗಿ ಅಭ್ಯಾಸಮಾಡಿದರು. ವಿದ್ಯಾರ್ಥಿಗಳು ಇಡಿಯಾಗಿ ಪರಿಸ್ಥಿತಿಯನ್ನು ಅರಿಯುವಂತಹ ಸಾಮರ್ಥ್ಯವನ್ನು ರೂಪಿಸುವುದು ಸುಲಭದ ಮಾತಾಗಿರಲಿಲ್ಲ. ಇಲ್ಲವಾದಲ್ಲಿ ಕುರುಡರು ಆನೆಯನ್ನು ವರ್ಣಿಸಿದಂತಾಗಿತ್ತು.

## ಸವಾಲುಗಳು

ಈ ಮಾದರಿ ಪರಿವರ್ತನೆಯು ಸರಾಗವಾಗಿರಲಿಲ್ಲ. ಈ ಪ್ರಕ್ರಿಯೆಯು ಅನ್ವೇಷಣೆಗೆ ಸಮಯವನ್ನು ಬೇಡುತ್ತದೆ, ತಪ್ಪುಗಳಾಗುತ್ತವೆ, ಕಂಡುಕೊಂಡಿದ್ದನ್ನು ಪುನರ್‌ಪರಿಶೀಲಿಸಿ ಶಿಕ್ಷಕರ ನೆರವಿನೊಂದಿಗೆ ಅಂತಿಮ ನಿರ್ಧಾರಗಳನ್ನು ಕೈಗೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ತಾಳ್ಮೆಗೆಡುತ್ತಿದ್ದರು. ಇನ್ನೊಂದೆಡೆ, ಈ ಪ್ರಕ್ರಿಯೆಯನ್ನು ಸುಗಮವಾಗಿರಿಸಲು ತರಗತಿ ನಡೆಯುವ ಸ್ಥಳವನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸಬೇಕಾಯಿತು. ಭಾರತೀಯ ಶೈಲಿಯ ತರಗತಿಗಳಲ್ಲಿ ಎತ್ತರದ ವೇದಿಕೆಯಿದ್ದು ಶಿಕ್ಷಕರನ್ನು ವಿದ್ಯಾರ್ಥಿಗಳು ತಲೆಯೆತ್ತಿ ನೋಡುವಂತೆ ಇರುತ್ತದೆ. ಅಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ. ವಿಶ್ವವಿದ್ಯಾಲಯದೊಳಗೆ ಇದಕ್ಕೆ ಅವಕಾಶಗಳು ಕಡಿಮೆಯಿದ್ದವು. ಕಲಿಕೆಯನ್ನು ವೈವಿಧ್ಯಮಯಗೊಳಿಸುವ ಮೂಲಕ ಅದನ್ನು ತೋಟ, ಮಾರುಕಟ್ಟೆ, ಕೈಗಾರಿಕೆಗಳಿಗೆ ಕೊಂಡೊಯ್ಯುವ ಮೂಲಕ ಈ ಗಡಿಗಳನ್ನು ಮುರಿಯಬಹುದಿತ್ತು. ಈ ರೀತಿಯ ವೈವಿಧ್ಯೀಕರಣವು ವಿವಿಧ ಬಗೆಯ ಸಂಪನ್ಮೂಲ ವ್ಯಕ್ತಿಗಳನ್ನು ಒಂದೇ ಮಟ್ಟದ ಕೌಶಲಕ್ಕೆ ಒಗ್ಗಿಸುವುದು ಹೊಸ ಸವಾಲುಗಳನ್ನು ಒಡ್ಡುತ್ತದೆ.

ಕೋವಿಡ್, ಕಳೆದೆರಡು ವರ್ಷಗಳಲ್ಲಿ ಕೆಲವು ಸವಾಲುಗಳನ್ನು ಒಡ್ಡಿದೆ. ಅವುಗಳನ್ನು ಅಳವಡಿಸಿಕೊಳ್ಳುವಾಗ ಆನ್‌ಲೈನ್ ಮೂಲಕ ವಿವಿಧ ದೇಶಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಪಡೆಯುವ ಅವಕಾಶ ಹಾಗೂ ವೈವಿಧ್ಯತೆಯನ್ನು ಒಳಗೊಳ್ಳಬಹುದು ಎನ್ನುವುದು ಅರಿವಾಯಿತು. ಈ ಎಲ್ಲ ಸವಾಲುಗಳ ನಡುವೆಯೂ ನಮ್ಮ ಕೆಲಸವನ್ನು ಖುಷಿಯಿಂದ ಮಾಡಿದ್ದೇವೆ. ನಾವೀಗ ಐದು ದೇಶಗಳಲ್ಲಿ ಹರಡಿರುವ ಕೃಷಿವಿಜ್ಞಾನದ ವೃತ್ತಿಗಾರರ ದೊಡ್ಡ ಸಂಪರ್ಕಜಾಲದ ಭಾಗವಾಗಿದ್ದೇವೆ. ◆

**ಅಂಶುಮನ್ ದಾಸ್** ಅವರು ಕಳೆದ ಎರಡು ದಶಕಗಳಿಂದ ಸಣ್ಣ ರೈತರೊಂದಿಗೆ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ Welthungerhilfe ಜೊತೆಗೆ ಸಹಯೋಗ ಹೊಂದಿದ್ದಾರೆ. ಅವರು ಆಹಾರ ಮತ್ತು ಕೃಷಿ ವ್ಯವಸ್ಥೆಯಲ್ಲಿನ ಭವಿಷ್ಯದ ವೃತ್ತಿಪರರಿಗೆ ಶಿಕ್ಷಣಶಾಸ್ತ್ರವನ್ನು ಅಭಿವೃದ್ಧಿಪಡಿಸುವ ಜಾಗತಿಕ ಸಂಶೋಧನಾ ಒಕ್ಕೂಟದ ಭಾಗವಾಗಿದ್ದರು. ಶಿಕ್ಷಣಶಾಸ್ತ್ರದ ಕುರಿತು ತಿಳಿಯಲು ಇಲ್ಲಿಗೆ ಭೇಟಿ ನೀಡಿ https://www.nextfood-project.eu/ .

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 24, ಸಂಚಿಕೆ 2, ಜೂನ್ 2022.

# ಪ್ರವಾಹ ಪೀಡಿತ ಸಮುದಾಯಗಳ ಸಹಿಷ್ಣುತೆಯ ಗುಣವನ್ನು ಹೆಚ್ಚಿಸುವುದು

**ಅರ್ಚನಾ ಶ್ರೀವಾಸ್ತವ ಮತ್ತು ಬಿಜಯ್ ಪ್ರಕಾಶ್**

**ಪ್ರವಾಹ ಬಂದು ಹೂಳು ತುಂಬಿದಾಗ ಕೃಷಿ ಮಾಡುವುದು ಸವಾಲಾಗಿ ಪರಿಣಮಿಸುತ್ತದೆ. ಇದು ರೈತರ ಬದುಕು ಮತ್ತು ಹವಾಮಾನ ಎರಡನ್ನೂ ದುರ್ಬಲಗೊಳಿಸುತ್ತದೆ.**

ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯ ಬಾಘಾ 1, ಬಾಘಾ 2, ಮಧುಬನಿ, ಭಿಟ್ಟಾ, ಪಿಪ್ರಾಸಿ ಬ್ಲಾಕ್‌ಗಳು ಮತ್ತು ಉತ್ತರ ಪ್ರದೇಶದ ಮಹಾರಾಜ್‌ಗಂಜ್ ಮತ್ತು ಕುಶಿನಗರ ಜಿಲ್ಲೆಗಳ ನಿಚ್ಲೌಲ್ ಮತ್ತು ಖಡ್ಡಾ ಬ್ಲಾಕ್‌ಗಳಲ್ಲಿ ಹಲವಾರು ಗ್ರಾಮಗಳು ಗಂಡಕ್ ನದಿಯ ದಡದಲ್ಲಿ ಗಂಡಕ್ ಅಣೆಕಟ್ಟೆಗೆ ಸಮೀಪದಲ್ಲಿವೆ. ಆ ಪ್ರದೇಶಗಳು ಮತ್ತು ನದಿಯ ನಡುವೆ ಯಾವುದೇ ಅಡ್ಡಕಟ್ಟೆಗಳು ಇಲ್ಲದಿರುವುದರಿಂದ, ಪ್ರತಿ ವರ್ಷ ಪ್ರವಾಹ ಮತ್ತು ಜಲಾವೃತದಂತಹ ಸಮಸ್ಯೆ ಎದುರಿಸುತ್ತಿದ್ದಾರೆ. ಭಾರಿ ಮಳೆ ಮತ್ತು ಹತ್ತಿರದ ಪರ್ವತ ಪ್ರದೇಶದಿಂದ ಹರಿದು ಬರುವ ನೀರು, ಖಾರಿಫ್ ಬೆಳೆಗಳು ಮತ್ತು ಋತುಮಾನದ ತರಕಾರಿ ಬೆಳೆಗಳನ್ನು ಹಾಳುಮಾಡುತ್ತದೆ. ವಾಲ್ಮೀಕಿ ವನ್ಯಜೀವಿ ಅಭಯಾರಣ್ಯಕ್ಕೆ ಸಮೀಪದಲ್ಲಿರುವುದರಿಂದ, ಈ ಪ್ರದೇಶದಲ್ಲಿ ಪ್ರಾಣಿಗಳು ಹೇರಳವಾಗಿ ಕಂಡುಬರುತ್ತವೆ.

ಇಲ್ಲಿನ ಹಳ್ಳಿಗರಿಗೆ ಕೃಷಿಯು ಪ್ರಾಥಮಿಕ ಆದಾಯ ಮೂಲವಾಗಿದೆ. ಖಾರಿಫ್ ಅವಧಿಯಲ್ಲಿ ಕೇವಲ 15–20% ಭೂಮಿಯಲ್ಲಿ ಮಾತ್ರ ಬೆಳೆ ಬೆಳೆಯಲಾಗುತ್ತದೆ. ರಾಬಿ ಋತುವಿನಲ್ಲಿ ಗೋಧಿ, ಸಾಸಿವೆ, ಉದ್ದು ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತದೆ. ಸುಮಾರು ಆರು ತಿಂಗಳ ಕಾಲ ಭೂಮಿಯಲ್ಲಿ ನೀರು ನಿಲ್ಲುವುದರಿಂದ ಭತ್ತದ ಕೃಷಿ ಮಾಡುವುದು ಕಷ್ಟ. ಕಬ್ಬು ಈ ಪ್ರದೇಶದ ಮುಖ್ಯ ಬೆಳೆ. ರೈತರು ತಮ್ಮ ಕಬ್ಬನ್ನು ಸ್ಥಳೀಯ ಎರಡು ಸಕ್ಕರೆ ಕಾರ್ಖಾನೆಗಳಿಗೆ ಅಥವಾ ಮಾರಾಟಗಾರರಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಬೇಕೆಂದು ಒತ್ತಾಯಿಸಲಾಗುತ್ತದೆ. ರೈತರು ತಮ್ಮ ಕಬ್ಬನ್ನು ಉತ್ತರ ಪ್ರದೇಶದ ಕುಶಿ ನಗರ ಜಿಲ್ಲೆಯ ಬೆಲ್ಲ ತಯಾರಕರಿಗೆ ಮಾರಾಟ ಮಾಡುತ್ತಾರೆ. ಅದು ಅವರಿಗೆ ಒಳ್ಳೆಯ ಬೆಲೆಯನ್ನು ತಂದುಕೊಡುವುದಿಲ್ಲ.

2018 ರಲ್ಲಿ, ಗೋರಖ್‌ಪುರ ಎನ್ವಿರಾನ್‌ಮೆಂಟಲ್ ಆಕ್ಷನ್ ಗ್ರೂಪ್ (GEAG) ಎನ್ನುವ ಎನ್‌ಜಿಒ, ಪಶ್ಚಿಮ ಚಂಪಾರಣ್‌ನ ರಾಜ್‌ವತಿಯಾ ಗ್ರಾಮದಲ್ಲಿ ಕೆಲಸ ಮಾಡಲು ಪ್ರಾರಂಭಿಸಿತು. ಸಮುದಾಯಕ್ಕೆ ಸ್ಥಿತಿಸ್ಥಾಪಕತ್ವ/ಸಹಿಷ್ಣುತೆಯ ಗುಣವನ್ನು ರೂಪಿಸಲು ಹಲವಾರು ಉಪಕ್ರಮಗಳನ್ನು LWR ಬೆಂಬಲಿತ "ಕಾಂಗ್ರೇಷನಲ್ ಟ್ರಾನ್ಸ್‌ಬೌಂಡರಿ ಫ್ಲಡ್ ರೆಸಿಲಿಯನ್ಸ್ ಪ್ರಾಜೆಕ್ಟ್, ಗಂಡಕ್ ರಿವರ್ ಬೇಸಿನ್" ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಗ್ರಾಮ ವಿಪತ್ತು ನಿರ್ವಹಣಾ ಸಮಿತಿ, ರೈತ ಕ್ಷೇತ್ರ ಶಾಲೆ, ಸ್ವ-ಸಹಾಯ ಗುಂಪುಗಳು ಮುಂತಾದ ಗ್ರಾಮ ಮಟ್ಟದ ಸಂಸ್ಥೆಗಳನ್ನು ಸಂಘಟನೆಯು ಇದರಲ್ಲಿ ಸೇರಿದೆ. ಈ ಯೋಜನೆಯ ಲಾಭ ಪಡೆದ ಕೃಷಿಕರಾದ ಶ್ರೀಮತಿ ನಿಶಾದೇವಿ ಅವರ ವಿವರ ಹೀಗಿದೆ.

## ನಿಶಾದೇವಿ, ಮಾದರಿ ವ್ಯಕ್ತಿ

ನಿಶಾ ದೇವಿ, ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯ ರಾಜವತಿಯಾ ಗ್ರಾಮದವರು. ನಿಶಾ 1.5 ಎಕರೆ ಕೃಷಿಯೋಗ್ಯ ಭೂಮಿಯನ್ನು ಹೊಂದಿದ್ದು ಅದರಲ್ಲಿ 0.4 ಎಕರೆ ಜಮೀನು ಗಂಡಕ್ ನದಿಯ ಬಳಿ ಪ್ರವಾಹ ಮತ್ತು ಜಲಾವೃತ ಪ್ರದೇಶದಲ್ಲಿದೆ. ವರ್ಷಕ್ಕೆ 6 ತಿಂಗಳ ಕಾಲ ಹೊಲಗಳು ಮುಳುಗಡೆಯಾಗುವುದರಿಂದ ಕುಟುಂಬಕ್ಕೆ ಅಗತ್ಯವಿರುವಷ್ಟು ಆಹಾರ ಸಿಗುವ ಭರವಸೆ ಇಲ್ಲದಂತಾಗಿದೆ. ಅವಳ ಗಂಡ ಕುಟುಂಬಕ್ಕೆ ನೆರವಾಗಲು ಹಣ ಸಂಪಾದನೆ ಮಾಡಲು ದೆಹಲಿ, ಬೆಂಗಳೂರು ಇತ್ಯಾದಿ ದೊಡ್ಡನಗರಗಳಿಗೆ ವಲಸೆ ಹೋಗುತ್ತಾನೆ.

2020 ರಲ್ಲಿ, COVID-19 ಸಾಂಕ್ರಾಮಿಕ ಸಮಯದಲ್ಲಿ, ನಿಶಾ ಕಠಿಣ ಪರಿಸ್ಥಿತಿಯನ್ನು ಎದುರಿಸಿದಳು. ಜೂನ್ ತಿಂಗಳಿನಲ್ಲಿ ಅವಳ ಹೊಲ ಪ್ರವಾಹಕ್ಕೆ ಸಿಲುಕಿದ್ದರಿಂದ  ಬೆಳೆದು ನಿಂತಿದ್ದ ಬೆಳೆ ನಾಶವಾಯಿತು. ಇದರ ಜೊತೆಗೆ, ಸಾಂಕ್ರಾಮಿಕ ಪರಿಸ್ಥಿತಿಗಳಿಂದಾಗಿ ಅವಳ ಪತಿ ನಗರದಿಂದ ಹಿಂತಿರುಗಬೇಕಾಯಿತು. ಇದು ಅವರನ್ನು ಸಂಕಷ್ಟಕ್ಕೆ ತಳ್ಳಿತು.

ನಿಶಾ ದೇವಿ ಅವರು ಎಫ್‌ಜಿಡಿ ಸಭೆಯಲ್ಲಿ GEAG ತಂಡದ ಸದಸ್ಯರನ್ನು ಭೇಟಿಯಾದರು, ಅಲ್ಲಿ ಅವರು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೃಷಿಯನ್ನು ಹೆಚ್ಚಿಸುವ ಸರಳವಾದ ಹಾಗೂ ಸ್ಥಿತಿಸ್ಥಾಪಕತ್ವ ಗುಣಹೊಂದಿದ ಪದ್ಧತಿಗಳ ಬಗ್ಗೆ ತಿಳಿದುಕೊಂಡರು. ಇದರಲ್ಲಿ ಸೆಣಬಿನ ಚೀಲ ಕೃಷಿ, ಬಿದಿರಿನ ರಚನೆಗಳ ಬಳಕೆ, ದಿಬ್ಬ, ಬದು ಬೇಸಾಯ, ರೈಸ್ಡ್ ಬೆಡ್ ಫಾರ್ಮಿಂಗ್, ನರ್ಸರಿ ಮೊದಲಾದ ವೈಶಿಷ್ಟ್ಯಗಳಿದ್ದವು. ಅವಳು ರೈತ ಕ್ಷೇತ್ರ ಶಾಲೆಗಳಲ್ಲಿ ಭಾಗವಹಿಸಿದಳು ಮತ್ತು ಮಟ್ಕಾ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಪರಿಣಾಮ ಮತ್ತು ಅವುಗಳ ದೀರ್ಘಕಾಲೀನ ಆರೋಗ್ಯ, ಪರಿಸರ ಪ್ರಯೋಜನಗಳ ಬಗ್ಗೆ ತಿಳಿದುಕೊಂಡಳು. ಮಟ್ಕಾ ಗೊಬ್ಬರ ಮತ್ತು ಮಟ್ಕಾ ಕೀಟನಾಶಕಗಳನ್ನು ತಯಾರಿಸುವ ಪ್ರಕ್ರಿಯೆಯನ್ನು ಸಹ ಕಲಿತರು. ಅವಳು ತನ್ನ ಕೃಷಿಭೂಮಿಯಲ್ಲಿ GEAG ತಂಡದ ಮೂಲಕ FFS ಅವಧಿಗಳಲ್ಲಿ ಕಲಿತ ವಿವಿಧ ಕೃಷಿ ತಂತ್ರಗಳನ್ನು



ಅಂತರ ಬೆಳೆಯ ಮೂಲಕ ನಿಶಾದೇವಿ ಹೆಚ್ಚುವರಿ ಆದಾಯವನ್ನು ಗಳಿಸಿದಳು

ಕಾರ್ಯಗತಗೊಳಿಸಿದಳು. ವಾಟ್ಸಾಪ್ ಸಂದೇಶಗಳು, ಎಸ್‌ಎಂಎಸ್ ಸಂದೇಶಗಳು ಮತ್ತು ಸಮುದಾಯ ಸ್ಥಳಗಳಲ್ಲಿ ಸ್ಥಾಪಿಸಲಾದ ಪ್ರದರ್ಶಕ(ಡಿಸ್ಪ್ಲೇ) ಬೋರ್ಡ್ ಮೂಲಕ ಹವಾಮಾನ ಮುನ್ಸೂಚನೆ ಮತ್ತು ಕೃಷಿ ಸಲಹೆಯಿಂದ ಪಡೆದ ಮಾಹಿತಿಯನ್ನು ತನ್ನ ಕೃಷಿ ಚಟುವಟಿಕೆಯನ್ನು ಯೋಜಿಸಲು ಬಳಸಿದಳು.

ಸೆಪ್ಟೆಂಬರ್ 2020 ರಲ್ಲಿ, ಅವರು GEAG ಯೋಜನಾ ತಂಡದಿಂದ ಸಿಂಪಿ ಮಶ್ರೂಮ್ ಕೃಷಿಯ ಬಗ್ಗೆ ತಿಳಿದುಕೊಂಡರು. 18 ಚೀಲಗಳಷ್ಟು ಸಬ್‌ಸ್ಟ್ರೇಟ್ (ತಲಾಧಾರ) ಅನ್ನು ರೂ. 1,250 ವೆಚ್ಚದಲ್ಲಿ ತಯಾರಿಸಿದರು. ಸುಮಾರು ರೂ. 840ರ ವೆಚ್ಚದಲ್ಲಿ 40 ದಿನಗಳ ನಂತರ 7 ಕೆಜಿಯಷ್ಟು ಅಣಬೆಯನ್ನು ಬೆಳೆಸಿದರು. ಕ್ರಮೇಣ ಮೂರು ನಾಲ್ಕು ದಿನಕ್ಕೊಮ್ಮೆ ಅಣಬೆ ಬರಲಾರಂಭಿಸಿತು. ಡಿಸೆಂಬರ್ ವೇಳೆಗೆ ಒಟ್ಟು 45 ಕೆಜಿಯಷ್ಟು ಬೆಳೆ ಬಂದಿತು. ಕುಟುಂಬವು 15 ಕೆಜಿಯಷ್ಟು ಅಣಬೆಯನ್ನು ಬಳಸಿಕೊಂಡಿತು. ಇದು ಅವರ ಕುಟುಂಬದ ಪೌಷ್ಟಿಕಾಂಶಕ್ಕೆ ಕೊಡುಗೆ ನೀಡಿತು. ಉಳಿದ 30 ಕೆಜಿ ಅಣಬೆಯನ್ನು ಪ್ರತಿ ಕೆಜಿಗೆ 150.00 ರೂ ದರದಲ್ಲಿ ಮಾರಾಟ ಮಾಡುವ ಮೂಲಕ ಅವಳು ಹೆಚ್ಚುವರಿ ರೂ. 4,500.00 ಆದಾಯ ಗಳಿಸಿದಳು. ಹೀಗೆ ಮೂರು ತಿಂಗಳಲ್ಲಿ ನಿಶಾ ಸ್ವಲ್ಪ ಮಟ್ಟಿಗಿನ ಆದಾಯ ಗಳಿಸಿದಳು.

FFS ತರಗತಿಗಳಲ್ಲಿ ಕಲಿತ ಕೃಷಿ ಸಲಹೆ ಮತ್ತು ಹೊಸ ಕೃಷಿ ತಂತ್ರಗಳನ್ನು ಬಳಸಿಕೊಂಡು ನಿಶಾ ತರಕಾರಿ ಬೇಸಾಯವನ್ನು ಆರಂಭಿಸಿದಳು. ಅವಳು ತನ್ನ 0.30 ಎಕರೆ ಜಮೀನಿನಲ್ಲಿ ರಾಬಿ ಋತುವಿನಲ್ಲಿ ಎರಡು ಸಾಲು ಬೆಳ್ಳುಳ್ಳಿಯ ನಡುವೆ ಮೆಂತ್ಯ ಬೀಜವನ್ನು ಬಿತ್ತಿದಳು ಮತ್ತು ಹೊಲದ ಬದುಗಳಲ್ಲಿ ಮೂಲಂಗಿಯನ್ನು ಬೆಳೆಸಿದಳು. ಇದರಿಂದ ಅವಳು 7.5 ಕ್ವಿಂಟಾಲ್ ಬೆಳ್ಳುಳ್ಳಿ, 3.8 ಕ್ವಿಂಟಾಲ್ ಮೆಂತ್ಯ ಮತ್ತು 60 ಕೆ.ಜಿ ಮೂಲಂಗಿಯನ್ನು ಇಳುವರಿಯಾಗಿ ಪಡೆದಳು. ಹೀಗೆ ಮೂರು ಬೆಳೆಗಳಿಂದ ಹತ್ತು ಸಾವಿರ ರೂಪಾಯಿಗೂ ಹೆಚ್ಚು ಆದಾಯ ಗಳಿಸಿದಳು. ಒಳಸುರಿಯುವಿಕೆಗಳ ವೆಚ್ಚವೂ ಕಡಿಮೆಯಾಯಿತು. ಅವಳು ಬಳಸಿದ ಮಟ್ಕಾ ಖಾಡ್ ಮತ್ತು ಕೀಟನಾಶಕಗಳಿಗೆ ತಗುಲಿದ ವೆಚ್ಚ ರೂ. 1,980.

ಅಂತರ ಬೆಳೆ ಪದ್ಧತಿ ಅನುಸರಿಸಿ ಹೆಚ್ಚುವರಿ ಆದಾಯವನ್ನೂ ಗಳಿಸಿದಳು. ಅವಳು ಬೆಳ್ಳುಳ್ಳಿಯೊಂದಿಗೆ ಬೆಂಡೆಕಾಯಿ, ತುಪ್ಪೀರೆ ಮತ್ತು ಜೋಳವನ್ನು ಅಂತರಬೆಳೆಯಾಗಿ ಬೆಳೆಸಿದಳು. ಇದಕ್ಕೆ ಹೆಚ್ಚುವರಿ ರೂ. 12,600 ವೆಚ್ಚವಾಯಿತು. ಇವುಗಳಿಂದ 1.1 ಕ್ವಿಂಟಾಲ್ ತುಪ್ಪೀರೆ, 1.5 ಕ್ವಿಂಟಾಲ್ ಬೆಂಡೆಕಾಯಿ ಇಳುವರಿ ಪಡೆದಳು. ಅವುಗಳನ್ನು ಮಾರುಕಟ್ಟೆಯಲ್ಲಿ ಮಾರುವ ಮೂಲಕ ರೂ. 7,800 ಆದಾಯ ಗಳಿಸಿದಳು.

"ಈ ಯಶಸ್ಸನ್ನು ನೋಡಿದ ನನ್ನ ಪತಿ ಕೃಷಿ ಚಟುವಟಿಕೆಗಳಲ್ಲಿ ನನಗೆ ಬೆಂಬಲ ನೀಡಲು ಪ್ರಾರಂಭಿಸಿದರು. ಇದು ಡಿಸೆಂಬರ್‌ನಲ್ಲಿ ಒಂದು ಎಕರೆ ಹೂಳು ತುಂಬಿದ ಭೂಮಿಯಲ್ಲಿಯೂ ಕೃಷಿ ಮಾಡಲು ನನಗೆ ಉತ್ತೇಜನ ನೀಡಿತು. ಮಣ್ಣಿನ ಫಲವತ್ತತೆಯನ್ನು ಮರಳಿ ಪಡೆಯಲು ವಿವಿಧ ಕೃಷಿ ಆಧಾರಿತ ತಂತ್ರಗಳನ್ನು ಅಳವಡಿಸಿಕೊಂಡಿದ್ದೇವೆ. ಇವುಗಳಲ್ಲಿ ನಾವೇ ತಯಾರಿಸಿದ ಗೊಬ್ಬರ ಬಳಕೆ, ಸಾಲು ಬಿತ್ತನೆ ವಿಧಾನ, ಮಣ್ಣಿನ ತೇವಾಂಶ ಉಳಿಸಲು ಗಿಡಗಳ ಎಲೆಗಳ ಮುಚ್ಚಳಿಕೆಯನ್ನು ಹಾಕುವುದು ಸೇರಿವೆ," ಎಂದು ನಿಶಾ ಹೇಳುತ್ತಾರೆ.
ಅವಳು 12 ಇಂಚುಗಳಷ್ಟು ಅಗಲ ಮತ್ತು ಒಂದು ಇಂಚು ಆಳದ ಹೊಂಡವನ್ನು ಅಗೆದು ಅದರಲ್ಲಿ ಮನೆಯಲ್ಲಿ ತಯಾರಿಸಿದ ಗೊಬ್ಬರವನ್ನು ಹಾಕಿದಳು. ನಂತರ ತುಪ್ಪೀರೆ ಮತ್ತು ಸೋರೆಕಾಯಿಯನ್ನು ಕಲ್ಲಂಗಡಿಯೊಂದಿಗೆ ಅಂತರ ಬೆಳೆಯಾಗಿ ಸಾಲು ಬಿತ್ತನೆ ವಿಧಾನದಲ್ಲಿ ಬಿತ್ತನೆ ಮಾಡಲಾಯಿತು (ಒಂದು

ಬದಿಯಲ್ಲಿ 2–ಮೀಟರ್ ಅಂತರವನ್ನು ಕಾಯ್ದುಕೊಳ್ಳಲಾಯಿತು). ತೇವಾಂಶವನ್ನು ಉಳಿಸಲು ಕಲ್ಲಂಗಡಿಯ ಕೊಂಬೆಗಳನ್ನು ಕತ್ತರಿಸಿ ½ ಇಂಚು ದಪ್ಪದ ಹೊದಿಕೆಯಾಗಿ ನೆಲದ ಮೇಲೆ ಹರಡಲಾಯಿತು. ಇದು ನೀರಾವರಿ ವೆಚ್ಚವನ್ನು ತಗ್ಗಿಸಿತು. ಮುಚ್ಚಳಿಕೆಯನ್ನು ಬಳಸಿದ್ದರಿಂದ ಕಳೆ ಕೀಳುವ ಕೂಲಿ ಉಳಿತಾಯವಾಯಿತು. ಈ ಪದ್ಧತಿಯಿಂದಾಗಿ ಬೆಳೆಗಳು ಮಣ್ಣು ಮತ್ತು ಮರಳಿಗೆ ತಗಲುವುದು ತಪ್ಪಿ ಬೆಳೆ ಕೊಳೆಯುವುದು ಕಡಿಮೆಯಾಯಿತು.

ಹವಾಮಾನ ಸಂಬಂಧಿ ಮಾಹಿತಿಯನ್ನು ಬಳಸಿಕೊಳ್ಳುವ ಮೂಲಕ ಅವಳು ತನ್ನ ನೀರಾವರಿ ವೆಚ್ಚ ಮತ್ತು ಮಳೆಹಾನಿಯನ್ನು ಕಡಿಮೆಗೊಳಿಸಿಕೊಂಡಳು. ಇದರ ಪರಿಣಾಮವಾಗಿ, ಲಾಕ್‌ಡೌನ್ ಸಮಯದಲ್ಲಿ ಕಲ್ಲಂಗಡಿ, ಸೋರೆಕಾಯಿ, ತುಪ್ಪೀರೆಯನ್ನು ಹೂಳು ತುಂಬಿದ ಭೂಮಿಯಲ್ಲೇ ಬೆಳೆದು ಮಾರುವ ಮೂಲಕ ರೂ. 28,500 ಗಳಿಸಿದಳು.

ಇಂದು ನಿಶಾ ದೇವಿ ರಾಜವತಿಯಾ ಗ್ರಾಮದ ಮುಖ್ಯ ತರಬೇತುದಾರಳಾಗಿದ್ದಾಳೆ. ಅಣಬೆ ಬೇಸಾಯದ ಸುಲಭ ವಿಧಾನದಿಂದ ಪ್ರೇರಿತಳಾಗಿ, ಖುಷಿಯಿಂದ, ಉತ್ಸಾಹದಿಂದ ಬದಲಿ ಆದಾಯ ಮೂಲವಾಗಿ ಅಣಬೆ ಬೇಸಾಯ ಮಾಡಲು ಉತ್ತೇಜಿಸುತ್ತಾಳೆ. "ಅಣಬೆ ಬೇಸಾಯವು ರೈತರ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಸಾಮರ್ಥ್ಯವನ್ನು ಹೊಂದಿದ್ದು ಸಾಕ್ಷರಸ್ಥ ಮತ್ತು ಅನಕ್ಷರಸ್ಥ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ. ಮಹಿಳೆಯರಿಗೆ ಇದು ವರದಾನವಾಗಿದೆ. ಇದು ಮಹಿಳಾ ಸ್ನೇಹಿ ವೃತ್ತಿಯಾಗಿದ್ದು, ಮಹಿಳೆಯರು ತಮ್ಮ ಮನೆಯ ಜವಾಬ್ದಾರಿಗಳನ್ನು ಬಿಟ್ಟುಕೊಡದೆ ತಮ್ಮ ಸಮಯವನ್ನು ಬಳಸಿಕೊಳ್ಳಬಹುದು," ಎಂದು ಅವಳು ಹೇಳುತ್ತಾಳೆ.

ಹವಾಮಾನ ಮುನ್ಸೂಚನೆ ಮತ್ತು ಕೃಷಿ ಸಲಹೆಯು ನಿರ್ಧಾರ ತೆಗೆದುಕೊಳ್ಳುವಲ್ಲಿ ಮತ್ತು ಋತುಮಾನದ ಬೆಳೆಗಳನ್ನು ಯೋಜಿಸುವಲ್ಲಿ ಅವಳಿಗೆ ಸಹಾಯ ಮಾಡಿತು. ನಿಶಾದೇವಿಯು ತನ್ನ ಹೂಳು ತುಂಬಿದ ಭೂಮಿಯಲ್ಲಿ ಸ್ಥಿತಿಸ್ಥಾಪಕ ಪದ್ಧತಿಗಳು, ಡಿಜಿಟಲ್ ತಂತ್ರಜ್ಞಾನ, ನೈಸರ್ಗಿಕ ಸಂಪನ್ಮೂಲಗಳನ್ನು ಅಳವಡಿಸಿಕೊಂಡು ಯಶಸ್ವಿಯಾಗಿ ಬೇಸಾಯ ಮಾಡುವ ಮೂಲಕ ಉಳಿದ ರೈತರಿಗೆ ಮಾದರಿಯಾಗಿದ್ದಾಳೆ.

◆

**Archana Srivastava**
Project Coordinator
Email: archanasri844@gmail.com

**Bijay Prakash**
Environmental Planner
Email: bijay.plan@gmail.com

Gorakhpur Environmental Action Group
224, Purdilpur, M G College Road
Gorakhpur - 273 001, Uttar Pradesh
INDIA.
www.geagindia.org

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 24, ಸಂಚಿಕೆ 3, ಸೆಪ್ಟೆಂಬರ್ 2022.

## LEISA INDIA Language Editions



Hindi



Kannada



Oriya



Tamil



Telugu



Marathi



Punjabi

# ವರ್ಟಿಕಲ್ ಗಾರ್ಡನಿಂಗ್‌ನ ಹೊಸ ಹಾದಿಗಳು

**ಅರ್ಚನ ಭಟ್, ವಿಪಿನ್‌ದಾಸ್ ಪಿ ಮತ್ತು ಅಬ್ದುಲ್ಲ ಹಬೀಬ್**

**ಹೊಸ ಮಾದರಿಯು ಸ್ಫೂರ್ತಿದಾಯಕವಾಗಿದ್ದು, ಮರುಬಳಕೆಯ ಅರಿವು ಮತ್ತು ಹೊಸತನವನ್ನು ಹುಡುಕುವ ರೈತ ಅನ್ವೇಷಕರಿಗೆ, ಮಹತ್ವಾಕಾಂಕ್ಷಿ ನಗರ ಕೃಷಿಕರಿಗೆ ಅನುಕರಣೀಯ ಮಾದರಿಯಾಗಿದೆ.**



ಲಂಬವಾಗಿ ಜೋಡಿಸಲಾದ ಲೇಯರ್‌ಗಳಲ್ಲಿ ಬೆಳೆದ ವೈವಿಧ್ಯಮಯ ತರಕಾರಿಗಳು

ಖ್ಯಾತ ಕೃಷಿವಿಜ್ಞಾನಿ ಡಾ.ರತನ್ ಲಾಲ್ ತಮ್ಮ ಭಾಷಣವೊಂದರಲ್ಲಿ, ದಕ್ಷಿಣ ಏಷ್ಯಾ ಹೇಗೆ ಆಹಾರ ಭದ್ರತೆಯ ವಿಷಯದಲ್ಲಿ ವಿಫಲವಾಗಿದೆ ಎನ್ನುವುದನ್ನು ಅಧ್ಯಯನಗಳು ತೋರಿರುವುದನ್ನು ಕುರಿತು ಮಾತನಾಡುತ್ತಾರೆ. ದಕ್ಷಿಣ ಏಷ್ಯಾದ 57%ಗೂ ಹೆಚ್ಚು ಜನಸಂಖ್ಯೆಗೆ ಆರೋಗ್ಯಕರ ಆಹಾರ ಸಿಗುವುದಿಲ್ಲ ಎಂದು ವರದಿಯಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ, ಆಹಾರ ಭದ್ರತೆಯು ಸಮಸ್ಯೆಯು ದಿನದಿನಕ್ಕೂ ಹೆಚ್ಚುತ್ತಿದೆ. ಅದರಲ್ಲೂ ನಗರಗಳಲ್ಲಿ ಹೆಚ್ಚುತ್ತಿರುವ ಸ್ಥಳಾವಕಾಶದ ಕೊರತೆಯು ಇದನ್ನು ಇನ್ನಷ್ಟು ಜಟಿಲವಾಗಿಸಿದೆ. ತಾಳಿಕೆಯುಳ್ಳ / ಸ್ಥಿತಿಸ್ಥಾಪಕ ಆಹಾರ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವುದು, ನಗರದ ಆಹಾರ ಪೂರೈಕೆಯ ಸರಪಳಿಯನ್ನು ಸುಧಾರಿಸುವುದು, ಮನೆ ಕೈತೋಟ ಮತ್ತು ನಗರ ಕೃಷಿಯನ್ನು ಪ್ರಚುರಪಡಿಸುವ ಅಗತ್ಯವಿದೆ. ನಗರದ ಮನೆ ಕೈತೋಟಗಳು ಮನೆಬಳಕೆಗೆ ಆರೋಗ್ಯಕರ ತರಕಾರಿಗಳನ್ನು ಒದಗಿಸುವುದರೊಂದಿಗೆ ಸುತ್ತಲ ಪರಿಸರವನ್ನು ಉತ್ತಮಗೊಳಿಸುತ್ತದೆ. ಲಭ್ಯವಿರುವ ಸೀಮಿತ ಸ್ಥಳಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಅವುಗಳನ್ನು ಬೆಳೆಯಬಹುದು.

ಕೇರಳದ ವೈನಾಡಿನ ಪುಲ್ಪಲ್ಲಿಯ ಜನಪ್ರಿಯ ವ್ಯಕ್ತಿ ಶ್ರೀ ವರ್ಗೀಸ್. ತಮ್ಮ ಕುತೂಹಲ ಹಾಗೂ ಉತ್ಸಾಹಿ ಮನೋಭಾವದಿಂದಾಗಿ ವರ್ಟಿಕಲ್ ಗಾರ್ಡನಿಂಗ್‌ನಲ್ಲಿ ಮೊದಲಿಗರಾಗಿದ್ದಾರೆ. ವರ್ಗೀಸ್ ತಮ್ಮ 60ನೇ ವಯಸ್ಸಿನಲ್ಲೂ ನವಾನ್ವೇಷಕ ಕೃಷಿಕರು ಹಾಗೂ ವಿನಮ್ರ ವ್ಯಕ್ತಿಯಾಗಿದ್ದಾರೆ. ತಮ್ಮ ಮನೆಯ ಮುಂದಿನ ಅಂಗಳ ಹಾಗೂ ಹಿತ್ತಲನ್ನು ಬಳಸಿಕೊಂಡು ಕ್ರಿಯಾತ್ಮಕ ಮಾದರಿಗಳನ್ನು ಯಶಸ್ವಿಯಾಗಿ ಸೃಷ್ಟಿಸಿದ್ದಾರೆ. ರೇಡಿಯೋ ಮೆಕ್ಯಾನಿಕ್ ಕೆಲಸವನ್ನು ಬಿಟ್ಟಮೇಲೆ ಇಪ್ಪತ್ತು ವರ್ಷಗಳಿಂದ ಅವರು ಕೃಷಿಯಲ್ಲಿ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಪ್ರಸ್ತುತ, ಅವರು ವರ್ಟಿಕಲ್ ಗಾರ್ಡನಿಂಗ್ ಮತ್ತು ಇತರ ಮಾದರಿಗಳ ಮೂಲಕ ಕ್ಯಾರೆಟ್, ಎಲೆಕೋಸು, ಆಲೂಗಡ್ಡೆ, ಟಪಿಯೋಕಾ, ಫೆನ್ನೆಲ್, ಸ್ಟ್ರಾಬೆರಿ, ಮೆಣಸಿನಕಾಯಿ, ಸಿಹಿ ಗೆಣಸು ಮುಂತಾದ ವೈವಿಧ್ಯಮಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ವರ್ಗೀಸ್ ಅವರು ಆರಂಭದಲ್ಲಿ ಮುಂದಿನ ಅಂಗಳದಲ್ಲಿ ಅಲಂಕಾರಿಕ ಗಿಡಗಳನ್ನು ಬೆಳೆಸಿದ್ದರು. ಅದು ತಮ್ಮ ಕುಟುಂಬಕ್ಕೆ ಆಹಾರವನ್ನು ಒದಗಿಸುವುದಿಲ್ಲ ಎನ್ನುವುದು ಅರಿವಾದ ನಂತರ ತರಕಾರಿಗಳನ್ನು ಬೆಳೆಸಲು ನಿರ್ಧರಿಸಿದರು. ಸೌಂದರ್ಯಾತ್ಮಕವಾಗಿಯೂ ಇದ್ದು ವೈವಿಧ್ಯಮಯ ಬೆಳೆ ಬೆಳೆಯಲು ಸಾಧ್ಯವಾಗುವಂತೆ ಸ್ಥಳವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ನಿರ್ಧರಿಸಿದರು. ಅಡುಗೆಮನೆ ತ್ಯಾಜ್ಯ, ಒಣಗಿದ ಎಲೆಗಳು, ಭತ್ತದ ಹುಲ್ಲು ಇವುಗಳನ್ನು ಗೊಬ್ಬರ ಮತ್ತು ಮಣ್ಣನ್ನು ನಾಟಿಗೆ ಬಳಸಿದರು.

### ವರ್ಟಿಕಲ್ ಗಾರ್ಡನಿಂಗ್ ಮಾದರಿಗಳು

ವರ್ಗೀಸ್ ಅವರು ಹಲವು ರೀತಿಯ ವಿನೂತನ ವರ್ಟಿಕಲ್ ಗಾರ್ಡನಿಂಗ್ ಮಾದರಿಗಳನ್ನು ಅಭಿವೃದ್ಧಿಪಡಿಸಿದ್ದಾರೆ.

**GI ನೆಟ್ ಮತ್ತು PVC ಪೈಪ್ ಮಾದರಿ ವ್ಯವಸ್ಥೆ:** ಇದನ್ನು ಮುಖ್ಯವಾಗಿ ಅವರು ಮುಂಭಾಗದಲ್ಲಿ ಕ್ಯಾರೆಟ್, ಎಲೆಕೋಸು, ಮೆಣಸಿನಕಾಯಿ, ದೊಣ್ಣೆಮೆಣಸಿನಕಾಯಿ, ಬದನೆ, ಸಿಹಿ ಗೆಣಸು ಮತ್ತು ಸ್ಟ್ರಾಬೆರಿ ಸೇರಿದಂತೆ ವಿವಿಧ ತರಕಾರಿಗಳನ್ನು ಬೆಳೆಯಲು ಬಳಸಿದರು. ಇದರಲ್ಲಿ ಒಮ್ಮೆಗೆ 24 ಗಿಡಗಳನ್ನು ಅಳವಡಿಸಬಹುದು. ಇದು ಗಟ್ಟಿಮುಟ್ಟಾದ ನಾರು/ಬಟ್ಟೆ ಅಥವಾ ಶೇಡ್ ನೆಟ್ ಬಳಸುತ್ತದೆ. ಇದನ್ನು GI (2 ಇಂಚಿನ ಅಂತರ) ನೆಟ್ ಮೂಲಕ ಮುಚ್ಚಲಾಗುತ್ತದೆ. ಈ

ಸಿಲಿಂಡರ್ ಆಕಾರದ ಮಾದರಿಯಲ್ಲಿ ಗಿಡ ಬೆಳೆಯಲು ಅಗತ್ಯವಾದ ವಸ್ತುಗಳನ್ನು ತುಂಬಲಾಗುತ್ತದೆ. ನೀರು ವ್ಯರ್ಥವಾಗಿ ಹರಿದು ಹೋಗದಂತೆ ತಡೆಯಲು ತಳದಲ್ಲಿ ಭತ್ತದ ಹುಲ್ಲು ಅಥವ ಎಲೆಗಳನ್ನು ಹಾಸಲಾಗುತ್ತದೆ. ಇದರ ಮೇಲೆ ಅಡುಗೆಮನೆ ತ್ಯಾಜ್ಯವನ್ನು ಸ್ವಲ್ಪ ಮಣ್ಣು ಮತ್ತು ಗೊಬ್ಬರದೊಂದಿಗೆ ಹಾಕಲಾಗುತ್ತದೆ. ಪ್ರತಿ ಪದರವನ್ನು ಒತ್ತಿ ಗಟ್ಟಿಯಾಗಿರುವಂತೆ ಹಾಕಲಾಗುತ್ತದೆ. ನೀರು ಪೂರೈಕೆ ಉದ್ದೇಶಕ್ಕಾಗಿ ನಡುವೆ ಪೈಪುಗಳನ್ನು 3.5 ಅಂತರದಲ್ಲಿ ಅಳವಡಿಸಲಾಗುತ್ತದೆ. ಪ್ರಸ್ತುತ ವರ್ಗೀಸ್ ಅವರು ಹನಿ ನೀರಾವರಿ ಮೂಲಕ ವಿವಿಧ ಮಾದರಿಗಳಿಗೆ ನೀರುಣಿಸುತ್ತಿದ್ದಾರೆ. ಇದಕ್ಕೆ ಜಿಪ್ ಟೈಗಳನ್ನು ಬಳಸಿರುವುದರಿಂದ ಅವುಗಳನ್ನು ತೆಗೆಯುವುದು ಅಳವಡಿಸುವುದು ಸುಲಭ. ಇವುಗಳನ್ನು ಸುಮಾರು 10–15 ವರ್ಷಗಳವರೆಗೆ ಬಳಸಬಹುದು.

ತರಕಾರಿ ಸಸಿಗಳನ್ನು ನೆಡಲು ಸಣ್ಣ ಪಿವಿಸಿ ಪೈಪ್‌ಗಳನ್ನು ಸೂಕ್ತ ಅಂತರದಲ್ಲಿ ಅಳವಡಿಸಲಾಗಿದೆ. ಗಿಡಗಳು ದೊಡ್ಡದಾದಂತೆ ಅದರ ಬೆಂಬಲಕ್ಕಾಗಿ ಹೆಚ್ಚುವರಿ ಪೈಪ್ ಸೆಟ್ಟಿಂಗ್ ಅನ್ನು ಒದಗಿಸಲಾಗುತ್ತದೆ. ಪೈಪ್‌ಗಳಲ್ಲಿ ಬೇವಿನ ಹಿಂಡಿ, ಮಣ್ಣು ಮತ್ತು ಸಾವಯವ ಗೊಬ್ಬರ (ಹಸುವಿನ ಸಗಣಿ) ಮಿಶ್ರಣವನ್ನು ತುಂಬಿಸಲಾಗುತ್ತದೆ. ಈ ಮಿಶ್ರಣವು ಸಸ್ಯಗಳಿಗೆ ನೀರು ಮತ್ತು ಪೋಷಕಾಂಶಗಳನ್ನು ಸುಲಭವಾಗಿ ಹೀರಿಕೊಳ್ಳಲು ಸಹಾಯ ಮಾಡುತ್ತದೆ.

ಈ ವಿಧಾನದಲ್ಲಿ ಸ್ಟ್ರಾಬೆರಿಯನ್ನು ಪರಿಣಾಮಕಾರಿಯಾಗಿ ಬೆಳೆಯಬಹುದು. ಅಗತ್ಯವಿರುವ ಅಂತರದಲ್ಲಿ ರಂಧ್ರಗಳನ್ನು ಕೊರೆದು ಸ್ಟ್ರಾಬೆರಿ (ನಾರು) ಹರಡಿಕೊಳ್ಳಲು ಅವಕಾಶ ಕಲ್ಪಿಸಬೇಕು.

ಈ ವ್ಯವಸ್ಥೆಯಲ್ಲಿ ಸ್ಥಳವನ್ನು ಪರಿಣಾಮಕಾರಿಯಾಗಿ ಬಳಸಬಹುದು. ಗಿಡಗಳ ನಡುವೆ ಸಾಕಷ್ಟು ಅಂತರವಿರುವುದರಿಂದ ಕೀಟ ಹಾಗೂ ರೋಗಭಾದೆಯನ್ನು ತಡೆಯಬಹುದು. ಜೊತೆಗೆ ಕಳೆಯ ಸಮಸ್ಯೆ ಇರುವುದಿಲ್ಲ ಏಕೆಂದರೆ ಇದರಲ್ಲಿ ಬೆಳೆಗೆ ಮಾತ್ರ ಸ್ಥಳಾವಕಾಶ ಎಂದು ವರ್ಗೀಸ್ ಅವರು ಹೆಮ್ಮೆಯಿಂದ ವಿವರಿಸುತ್ತಾರೆ.

**ಅಡಿಕೆ ಮರದ ಮಾದರಿ ವ್ಯವಸ್ಥೆ:** ಹಿಂದಿನ ಮಾದರಿಯಂತೆಯೇ, ಇದು ಕೂಡ ಪರಿಸರ ಸ್ನೇಹಿ ಮತ್ತು ಅಗ್ಗದ ವ್ಯವಸ್ಥೆ. ಬಟ್ಟೆ ಮತ್ತು GI ನೆಟ್‌ಗೆ ಬದಲಿಗೆ ಅಡಿಕೆ ಮರ ಮತ್ತು ಒಣಗಿದ ಎಲೆಗಳನ್ನು ಬಳಸಲಾಗುತ್ತದೆ. ಮರದ ಹಲಗೆಗಳನ್ನು ಸಿಲಿಂಡರಾಕಾರದಲ್ಲಿ ಕಟ್ಟಿ ಅದರೊಳಗೆ ಒಣಹುಲ್ಲು, ಒಣಗಿದ ಎಲೆಗಳನ್ನು ತುಂಬಲಾಗುತ್ತದೆ. ನಂತರ ಅಡುಗೆ ಮನೆ ತ್ಯಾಜ್ಯವನ್ನು ಮಣ್ಣು ಮತ್ತು ಬೇವಿನ ಹಿಂಡಿ, ಸಾವಯವ ಗೊಬ್ಬರ ಇತ್ಯಾದಿಗಳನ್ನು ತುಂಬಲಾಗುತ್ತದೆ. ಇವೆಲ್ಲವನ್ನೂ ಸಿದ್ದಗೊಳಿಸಿಕೊಂಡ ಬಳಿಕ ಮರದಲ್ಲಿ ರಂಧ್ರಗಳನ್ನು ಕೊರೆದು ಅದರಲ್ಲಿ ಮೊಳಕೆಯೊಡೆದ ಆಲೂಗಡ್ಡೆಯನ್ನು (10 ಕಂಬಗಳಲ್ಲಿ ಸುಮಾರು 120 ಗಡ್ಡೆಗಳನ್ನು ನೆಡಬಹುದು) ನೆಡಬೇಕು. ಈ ಮಾದರಿಯಲ್ಲಿ ಆಲೂಗಡ್ಡೆಯ ಉತ್ತಮ ಇಳುವರಿಯನ್ನು ಪಡೆಯಬಹುದು. ಸಕಾಲದಲ್ಲಿ, ಅವರು ಗಿಡಗಳಿಗೆ ಸಾವಯವ ಗೊಬ್ಬರ, ಜೀವಾಮೃತ ಮತ್ತು ಬೇವಿನ ಹಿಂಡಿಯನ್ನು ಹೆಚ್ಚುವರಿ ಪೌಷ್ಟಿಕಾಂಶ ಒದಗಿಸಲು ಪೂರೈಸುತ್ತಾರೆ. ಮತ್ತೊಂದು ಕುತೂಹಲಕಾರಿ ಸಂಗತಿಯೆಂದರೆ, ವರ್ಗೀಸ್ ಅವರು ಒಂದೇ ಕಂಬದಲ್ಲಿ ವಿವಿಧ ಹಂತಗಳಲ್ಲಿ ಮೆಣಸಿನಕಾಯಿ ಮತ್ತು ಟೊಮೊಟೊ ಬೆಳೆಯನ್ನು ಯಶಸ್ವಿಯಾಗಿ ಬೆಳೆಸಿದರು. ಎಲ್ಲ ಬೆಳೆಗಳು ಉತ್ತಮ ಇಳುವರಿಯನ್ನು ನೀಡಿದವು. ಯಾವುದೇ ಬೆಳೆಯೂ ನಷ್ಟ ಅನುಭವಿಸಲಿಲ್ಲ.

**PVC ಪೈಪ್ ಮಾದರಿ ವ್ಯವಸ್ಥೆ:** ವರ್ಗೀಸ್ ಅವರು ವರ್ಟಿಕಲ್ ಗಾರ್ಡನಿಂಗ್ ವಿಧಾನದಲ್ಲಿ ಕ್ಯಾರೆಟ್, ಸೋಂಪು, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಪಿವಿಸಿ ಪೈಪ್‌ಗಳನ್ನು ಬಳಸಿ ಬೆಳೆಯುತ್ತಾರೆ. 6 ಇಂಚಿನ ಪಿವಿಸಿ ಪೈಪನ್ನು ಬೆಳೆ ಬೆಳೆಸಲು ಬಳಸಲಾಗುತ್ತದೆ. ಬಿತ್ತನೆಗೆ ಅನುಕೂಲವಾಗುವ ರೀತಿಯಲ್ಲಿ ಸೂಕ್ತ ಅಂತರದಲ್ಲಿ ಬಿಸಿಮಾಡಿದ ಕಬ್ಬಿಣದ ರಾಡ್ ಬಳಸಿ ಇಲ್ಲವೆ ಕತ್ತರಿಸಿ ರಂಧ್ರಗಳನ್ನು ಮಾಡಲಾಗುತ್ತದೆ. ಒಂದು ಪೈಪಿನಲ್ಲಿ ಸುಮಾರು 16 ರಿಂದ 20 ಗಿಡಗಳನ್ನು ನೆಡಬಹುದು. ಗಿಡಗಳು ದೊಡ್ಡದಾಗಲು ಹೆಚ್ಚುವರಿ ಆಧಾರವನ್ನು ಒದಗಿಸಲಾಗುತ್ತದೆ. ಗಿಡಗಳಿಗೆ ನೀರಾವರಿ ವ್ಯವಸ್ಥೆ ಒದಗಿಸಲು ನಡುವಲ್ಲಿ ಪೈಪೊಂದನ್ನು ಅಳವಡಿಸಲಾಗುತ್ತದೆ ಇಲ್ಲವೇ ಹನಿ ನೀರಾವರಿ ವ್ಯವಸ್ಥೆ ಮಾಡಲಾಗುತ್ತದೆ.

**ಮರಗೆಣಸು ಬೆಳೆಸುವ ವಿನೂತನ ವಿಧಾನ**

ಸಾಮಾನ್ಯ ವರ್ಟಿಕಲ್ ಗಾರ್ಡನಿಂಗ್ ಹೊರತಾಗಿ ವರ್ಗೀಸ್ ಅವರು ಮರಗೆಣಸನ್ನು ಬೆಳೆಸುವ ವಿನೂತನ ವಿಧಾನವನ್ನು ಕಂಡುಹಿಡಿದಿದ್ದಾರೆ. ಇದರಲ್ಲಿ ಹೆಚ್ಚು ಇಳುವರಿ ಗಳಿಸಬಹುದಾಗಿದೆ. ಅವರು ಕಂಡುಹಿಡಿದಿರುವ ವಿಧಾನದಲ್ಲಿ ಒಂದೇ ಬಳ್ಳಿಯಿಂದ ಮೂರು ಕಡೆಯಿಂದ ಗಡ್ಡೆಗಳನ್ನು ಪಡೆಯಬಹುದಾಗಿದೆ. ಈ ವಿಧಾನದಲ್ಲಿ ಬೇರಿನ ಮೇಲಿನ ಪದರದ ಮೇಲೆ ಇನ್ನೆರೆಡು ಪದರಗಳಲ್ಲಿ ಗ್ರೋಬ್ಯಾಗುಗಳನ್ನು ಇಡಲಾಗುತ್ತದೆ. ಮುಖ್ಯ ಕಾಂಡವು ಈ ಎರಡೂ ಪದರಗಳನ್ನು ಹಾದುಹೋಗುತ್ತದೆ. ಮುಂಚಿತವಾಗಿಯೇ ಬೆಳವಣಿಗೆಗೆ ಅನುಕೂಲವಾಗುವಂತೆ ಗ್ರೋಬ್ಯಾಗುಗಳಲ್ಲಿ ಹಾದುಹೋದ ಕಾಂಡದ ಭಾಗದಲ್ಲಿ ಸಣ್ಣ ಛೇದನವನ್ನು ಮಾಡಲಾಗುತ್ತದೆ. ಈ ವಿಧಾನದ ಮೂಲಕ ಒಂದೇ ಗಿಡದಲ್ಲಿ 25 ಕೆಜಿ ಮರಗೆಣಸನ್ನು ಪಡೆದುದಾಗಿ ವರ್ಗೀಸ್ ಅವರು ಹೇಳುತ್ತಾರೆ.

ಇದೇ ರೀತಿ ಅವರು ಹೊಸ ವಿಧಾನದಲ್ಲಿ ನೆರಳಿನಲ್ಲಿ ವೆನಿಲ್ಲಾ ಮತ್ತು ಪುದೀನವನ್ನು ಪ್ಲಾಸ್ಟಿಕ್ ಬಾಟಲುಗಳಲ್ಲಿ ಬೆಳೆಯುತ್ತಿದ್ದಾರೆ.

ವರ್ಗೀಸ್ ಅವರು ಕೆಲವು ಸಮಯದಿಂದ ಪಿವಿಸಿ ಮತ್ತು ಜಿಐ ಮಾದರಿಯ ವರ್ಟಿಕಲ್ ಗಾರ್ಡನಿಂಗ್ ಮಾಡುತ್ತಿದ್ದಾರೆ. ವೆಲ್ಡರ್‌ನ ಸಹಾಯದಿಂದ ಹಳೆಯ ಪಿವಿಸಿ ಪೈಪುಗಳು ಮತ್ತು ಜಿಐ ನೆಟ್‌ಗಳನ್ನು ಅಗತ್ಯಬಿದ್ದಾಗ ಮರುಬಳಕೆಗೆ ಹೊಂದುವಂತೆ ಸರಿಮಾಡಿಕೊಳ್ಳುತ್ತಾರೆ. ಅಗತ್ಯವಿದ್ದಾಗ ಮಾತ್ರ ಅವುಗಳನ್ನು ಹೊಸದಾಗಿ ಕೊಂಡುಕೊಳ್ಳುತ್ತಾರೆ.

ಈ ವಿಧಾನದಲ್ಲಿ ಪ್ರಶಂಸಾರ್ಹ ಸಂಗತಿ ಏನೆಂದರೆ ಇವುಗಳ ಒಳಗೆ ತುಂಬಿಸಲಾಗುವ ವಸ್ತುಗಳನ್ನು ಎರೆಹುಳ ಗೊಬ್ಬರದೊಂದಿಗೆ ಮಿಶ್ರಣಮಾಡಿ ಮರುಬಳಕೆ ಮಾಡಬಹುದು. ಇದನ್ನು ಗ್ರೋಬ್ಯಾಗುಗಳಿಗೂ ತುಂಬಿಸಿ ಮತ್ತೆ ಗಿಡ ಬೆಳೆಯಬಹುದು. ಈ ರೀತಿ ವರ್ಗೀಸ್ ಅವರು "ಮಿತಬಳಕೆ ಮರುಬಳಕೆ ಪುನರ್‌ಬಳಕೆ" ತತ್ವವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದಾರೆ.

**ಜೈವಿಕ ಒಳಸುರಿಯುವಿಕೆಗಳ ತಯಾರಿಕೆ ಮತ್ತು ಭವಿಷ್ಯದ ಯೋಜನೆಗಳು:** ಈ ವರ್ಟಿಕಲ್ ಗಾರ್ಡನಿಂಗ್‌ನ ಹೊರತಾಗಿ ವರ್ಗೀಸ್ ಅವರು ನಿರಂತರವಾಗಿ ಹೊಸವಿಧಾನಗಳನ್ನು ಕಂಡುಹಿಡಿದು ತಮ್ಮ ತೋಟದಲ್ಲಿ ಅಳವಡಿಸಿಕೊಳ್ಳುವಲ್ಲಿ ಸಕ್ರಿಯವಾಗಿದ್ದಾರೆ. ಅವರು ಜೈವಿಕ ರಸಗೊಬ್ಬರಗಳು ಮತ್ತು ಪೋಷಕಾಂಶ ಸುರಿಯುವಿಕೆಗಳಾದ ಜೀವಾಮೃತಂ, ಬೀಜಾಮೃತಂ, ಫಿಶ್‌ಅಮಿನೋ ಇತ್ಯಾದಿಗಳನ್ನು ತಯಾರಿಸುತ್ತಾರೆ. ತಮ್ಮ ಮನೆಯ ಹತ್ತಿರ ನರ್ಸರಿಯನ್ನು ಆರಂಭಿಸಿ ಸಸಿಗಳನ್ನು ಕಡಿಮೆ ಬೆಲೆಗೆ ಮಾರಲು ಯೋಜಿಸುತ್ತಿದ್ದಾರೆ. ಇದರೊಂದಿಗೆ ತಮ್ಮ ವರ್ಟಿಕಲ್ ಗಾರ್ಡನಿಂಗ್‌ನಲ್ಲಿ ಪಡೆದ ಹೆಚ್ಚುವರಿ

ತರಕಾರಿಗಳನ್ನು ಅಲ್ಲಿ ಮಾರುವ ಉದ್ದೇಶವಿಟ್ಟುಕೊಂಡಿದ್ದಾರೆ. ಈಗಾಗಲೇ ಇದಕ್ಕಾಗಿ ಶೆಡ್ ಕಟ್ಟಿದ್ದು ಇನ್ನು ಕೆಲವೇ ತಿಂಗಳಲ್ಲಿ ಅಲ್ಲಿ ವ್ಯಾಪಾರ ಶುರುಮಾಡಲಿದ್ದಾರೆ. ಮುಂಬರುವ ದಿನಗಳಲ್ಲಿ ತಮ್ಮ ಕುಟುಂಬದವರೊಂದಿಗೆ ಸೇರಿ ತಮ್ಮದೇ ನರ್ಸರಿಯಲ್ಲಿ ವಿವಿಧ ಬಗೆಯ ತರಕಾರಿ ಸಸಿಗಳು, ಕೃಷಿಗೆ ಅಗತ್ಯವಾದ ವಸ್ತುಗಳನ್ನು ಕಡಿಮೆ ದರದಲ್ಲಿ ರೈತರಿಗೆ ಒದಗಿಸುವ ಯೋಜನೆಯನ್ನು ಹೊಂದಿದ್ದಾರೆ.

**ಇತರರೊಂದಿಗೆ ಹಂಚಿಕೊಳ್ಳುವಿಕೆ:** ಅವರು ಹಲವಾರು ರೈತ ಗುಂಪುಗಳು ಮತ್ತು ವಾಟ್ಸಾಪ್ ಗುಂಪುಗಳಲ್ಲಿ ಸಕ್ರಿಯವಾಗಿದ್ದು ಅಲ್ಲಿ ತಮ್ಮ ಜ್ಞಾನವನ್ನು ಹಂಚಿಕೊಳ್ಳುತ್ತಾರೆ. ತರಬೇತಿ ನೀಡಲು ಸಂಪನ್ಮೂಲವ್ಯಕ್ತಿಯಾಗಿ ಕೂಡ ಕಾರ್ಯನಿರ್ವಹಿಸುತ್ತಾರೆ. ಅವರದೇ ಆದ ಯೂಟ್ಯೂಬ್ ಚಾನಲ್ (https://www.youtube.com/c/VARGHESEPULPALLY) ಹೊಂದಿದ್ದು ಅದರಲ್ಲಿ ತರಕಾರಿ ಕೈತೋಟ ಕುರಿತಾದ ತಮ್ಮ ವಿನೂತನ ಪದ್ಧತಿಗಳ ಕುರಿತು ಮಾಹಿತಿ ಹಂಚಿಕೊಳ್ಳುತ್ತಾರೆ. ಎಲ್ಲ ಮಾಹಿತಿಯನ್ನು ಫೋನಿನ ಮೂಲಕ ಇಲ್ಲವೇ ವಾಟ್ಸಾಪ್‌ನಲ್ಲಿ ಹಂಚಿಕೊಳ್ಳಲು ಸಾಧ್ಯವಿಲ್ಲ ಎಂದು ಯೂಟ್ಯೂಬ್ ಚಾನೆಲ್ ಶುರುಮಾಡಿದ್ದಾಗಿ ಹೇಳುತ್ತಾರೆ. ಈ ವಯಸ್ಸಿನಲ್ಲಿ ವರ್ಗೀಸ್ ಅವರು ಹೊಸ ವಿಧಾನಗಳನ್ನು ಕಲಿಯಲು ಉತ್ಸುಕರಾಗಿದ್ದು ಯುವರೈತರಿಗೆ ಸ್ಫೂರ್ತಿಯ ಮಾದರಿಯಾಗಿದ್ದಾರೆ. ವಿವಿಧ ಮಾಧ್ಯಮಗಳು ಅವರನ್ನು ಗುರುತಿಸಿ ಅವರಿಗೆ ತಮ್ಮ ಜ್ಞಾನವನ್ನು ಸಹರೈತರೊಂದಿಗೆ ಹಂಚಿಕೊಳ್ಳಲು ಸಹಾಯಮಾಡಿದ್ದನ್ನು ಸ್ಮರಿಸಿಕೊಳ್ಳುತ್ತಾರೆ. ತಮ್ಮ ತೋಟವನ್ನು ಅಭಿವೃದ್ಧಿಪಡಿಸಲು ಹಲವಾರು ಹೊಸ ಐಡಿಯಾಗಳನ್ನು ಹೊಂದಿದ್ದರೂ ಹಣಕಾಸಿನ ಕೊರತೆಯಿಂದಾಗಿ ಅವೆಲ್ಲವನ್ನೂ ಕೈಗೊಳ್ಳಲು ಅವರಿಗೆ ಸಾಧ್ಯವಾಗಿಲ್ಲ.

ಈ ವರ್ಟಿಕಲ್ ಗಾರ್ಡನಿಂಗ್ ವ್ಯವಸ್ಥೆಯು ನಗರವಾಸಿಗಳಿಗೆ ಕಡಿಮೆ ವೆಚ್ಚದಲ್ಲಿ ಕೈಗೊಳ್ಳಬಹುದಾದ ಮಾದರಿಯಾಗಬಲ್ಲದು ಎನ್ನುವುದು ಅವರ ಬಲವಾದ ನಂಬಿಕೆ.

◆

**Dr. Archana Bhatt**
Scientist

**Vipindas P**
Development Coordinator

**Abdulla Habeeb**
Development Associate
MSSRF-Community Agrobiodiversity Centre, Wayanad, Kerala

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 24, ಸಂಚಿಕೆ 1, ಮಾರ್ಚ್ 2022.



# ಸುಸ್ಥಿರ ಕೃಷಿಗಾಗಿ ಸೌರ ಶಕ್ತಿಯ ಮಾದರಿಗಳು

**ಅರುಣಕುಮಾರ ಶಿವರಾಯ್**

**ನಗರಗಳಲ್ಲಿ ಮನೆ ಕೈತೋಟಗಳು, ಖಾಸಗಿ ವಸತಿ ಸ್ಥಳಗಳಿಗೆ ಸೀಮಿತವಾಗಿದೆ. ಇದನ್ನು ವಿಸ್ತರಿಸಿದರೆ ನಗರಕ್ಕೆ ಆಹಾರ ಪೂರೈಸುವ ಸಾಮರ್ಥ್ಯವನ್ನು ಹೊಂದಿದೆ. ಕೇರಳದಲ್ಲಿ, ಸರ್ಕಾರದ ಮಧ್ಯಸ್ಥಿಕೆ ಮತ್ತು ಜನರ ಸಾಮಾಜಿಕ ಮಾಧ್ಯಮ ಆಧಾರಿತ ಉಪಕ್ರಮದಿಂದ ಬೆಂಬಲಿತವಾದ ನಗರಗಳ ಮನೆ ಕೈತೋಟಗಾರಿಕೆಯು ವ್ಯಾಪಕ ಸಾಮಾಜಿಕ ಚಳುವಳಿಯಾಗಿದೆ.**



**ಸೌರಶಕ್ತಿಯಿಂದ ಬೆಳೆಗಳಿಗೆ ಸಕಾಲಿಕ ನೀರಾವರಿಯನ್ನು ಖಾತ್ರಿಯಾಗಿಸಿದೆ.**

ಗ್ರಾಮೀಣ ಪ್ರದೇಶಗಳಲ್ಲಿ ಜಮೀನಿನ ಶಕ್ತಿ ಸಂಪನ್ಮೂಲದ ಅಗತ್ಯಗಳನ್ನು ಸಾರ್ವಜನಿಕ ವಿದ್ಯುತ್‌ಶಕ್ತಿಯ ವಿತರಣಾ ವ್ಯವಸ್ಥೆಯು ಮೂಲಕ ಪೂರೈಸಲಾಗುತ್ತದೆ. ಇದು ವಿವಿಧ ಉಪಕರಣಗಳನ್ನು ಬೆಂಬಲಿಸುತ್ತದೆ. ಅನಿಶ್ಚಿತ ವಿದ್ಯುತ್ ಕಡಿತಗಳು, ಅಪಾಯಕಾರಿ ವಿದ್ಯುತ್ ಏರಿಳಿತಗಳಿಂದಾಗಿ ಮೋಟಾರುಗಳು ಸುಟ್ಟುಹೋಗುವ, ಹಾನಿಗೊಳಗಾಗುವಂತಹ ಸವಾಲುಗಳನ್ನು ರೈತರು ಎದುರಿಸುತ್ತಿದ್ದಾರೆ. ಇವು ಹವಾಮಾನ ವೈಪರಿತ್ಯಗಳು ಮತ್ತು ಮಾರುಕಟ್ಟೆಯ ಏರಿಳಿತಗಳ ಜೊತೆಗೆ ಎದುರಾಗುವ ಸವಾಲುಗಳಾಗಿವೆ. ಸಾಕಷ್ಟು ಅಂತರ್ಜಲವಿದ್ದರೂ, ಅನಿಯಮಿತ ವಿದ್ಯುತ್ ಪೂರೈಕೆಯಿಂದಾಗಿ ರೈತರು ತಮ್ಮ ಸಂಪೂರ್ಣ ಭೂಮಿಗೆ ನೀರುಣಿಸಲು ಸಾಧ್ಯವಾಗುತ್ತಿಲ್ಲ.

ಈ ಸವಾಲುಗಳನ್ನು ಮಿತಗೊಳಿಸಲು, ಸಸ್ಟೈನ್ ಪ್ಲಸ್, ಸೆಲ್ಕೊ ಮತ್ತು ವಿಲ್ಗ್ರೋ ಫೌಂಡೇಶನ್‌ನ ಬೆಂಬಲದೊಂದಿಗೆ ಕಲಿಕೆ ಲೈವ್ಲಿಹುಡ್ಸ್ ತಂಡವು ನವೀಕರಿಸಬಹುದಾದ ಇಂಧನ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಆಧರಿಸಿದ ಪರಿಕಲ್ಪನೆಗಳನ್ನು ರೂಪಿಸಿ ಜಾರಿಗೆ ತಂದಿದೆ. ಸಮುದಾಯಗಳ ಉತ್ಸಾಹದಿಂದ ಪ್ರೇರಿತರಾಗಿ ಸೂಕ್ತವಾದ ಭೌಗೋಳಿಕತೆಯ ಬೆಂಬಲದೊಂದಿಗೆ ಟ್ರಸ್ಟ್ ಪರ್ಯಾಯ ಸೌರಶಕ್ತಿ ಚಾಲಿತ ಯೋಜನೆಯ ಮಾದರಿಗಳನ್ನು ಜಾರಿಗೆ ತಂದಿತು.

ರೈತರಿಗೆ ಹಲವು ರೀತಿಯಲ್ಲಿ ಸಹಾಯ ಮಾಡುವುದು ಇದರ ಒಟ್ಟಾರೆ ಉದ್ದೇಶವಾಗಿತ್ತು.

1) ವಿಶ್ವಾಸಾರ್ಹ ಸೌರ ಮಾದರಿಗಳನ್ನು ಸ್ಥಾಪಿಸುವ ಮೂಲಕ ಬೆಳೆ ವೈವಿಧ್ಯತೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ನೀರಿನ ಪೂರೈಕೆಗೆ ಉತ್ತಮ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದು.

2) ಉತ್ತಮ ಮೇವನ್ನು ಪಡೆಯಲು ಸೌರಚಾಲಿತ ಹೈಡ್ರೋಪೋನಿಕ್ಸ್ ಮತ್ತು ಬೆಳೆಗಳಿಗೆ ಸುಧಾರಿತ ಪೋಷಕಾಂಶ ನಿರ್ವಹಣೆಗಾಗಿ ಪಂಚಗವ್ಯ ಘಟಕಗಳಂತಹ ಹೊಸ ಉದ್ಯಮಗಳ ಅಭಿವೃದ್ಧಿಯನ್ನು ಅನ್ವೇಷಿಸುವುದು.

3) ರೈತ ರೈತರ ನಡುವೆ ಸಾಮುದಾಯಿಕ ಲಾಭ ಹಂಚಿಕೆ ಕಾರ್ಯವಿಧಾನಗಳನ್ನು ಉತ್ತೇಜಿಸುವುದು.

4) ಬ್ಯಾಂಕಿನಿಂದ ಸಾಲ ಪಡೆದು ಸ್ವಲ್ಪ ಮಟ್ಟಿಗಿನ ಹಣಕಾಸು ನೆರವಿನೊಂದಿಗೆ ಮುಖ್ಯ ರೈತ ಮಾದರಿಯನ್ನು ಸ್ಥಾಪಿಸಿಕೊಳ್ಳುವಂತೆ ಮಾಡುವುದು.

ಕೆಲವು ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ.

## 1. ನೀರಿನ ಸಮರ್ಥ ಬಳಕೆಗಾಗಿ ಮತ್ತು ಆದಾಯವನ್ನು ಹೆಚ್ಚಿಸುವುದಕ್ಕಾಗಿ ಸಮುದಾಯ ಸೌರ ನೀರಾವರಿ ಮಾದರಿ (CSIM 5 HP ಮಾದರಿ)

ಸೋಲಾರ್ ಪಂಪ್ ಅಳವಡಿಕೆ, ಬೆಳೆಗಳ ಮಲ್ಟಿ ಲೇಯರಿಂಗ್, ಮಣ್ಣು ಮತ್ತು ನೀರಿನ ಸಂರಕ್ಷಣೆ ಅಭ್ಯಾಸಗಳು ಮತ್ತು ಸರ್ಕಾರಿ ಇಲಾಖೆಗಳೊಂದಿಗೆ ಹೊಂದಾಣಿಕೆಯ ಮೇಲೆ ಕೇಂದ್ರೀಕರಿಸುವ ಮೂಲಕ ಈ ಮಾದರಿಯನ್ನು ಸಮಗ್ರವಾಗಿ ಯೋಜಿಸಿ ಕಾರ್ಯಗತಗೊಳಿಸಲಾಗಿದೆ.

ಸಮಯಕ್ಕೆ ಸರಿಯಾಗಿ ನೀರಾವರಿಯನ್ನು ಒದಗಿಸುವುದು ಮತ್ತು ನೀರಾವರಿ ಪ್ರದೇಶವನ್ನು ವಿಸ್ತರಿಸಲು ಸೋಲಾರ್ ಪಂಪುಗಳನ್ನು ಅಳವಡಿಸುವುದು ಮೊದಲ ಕ್ರಮವಾಗಿತ್ತು. ಕ್ರಮೇಣ, ರೈತರ ಆದಾಯವನ್ನು ಹೆಚ್ಚಿಸಲು ಒಂದೇ ಕ್ಷೇತ್ರದಲ್ಲಿ ಬಹು ಬೆಳೆಗಳನ್ನು ಪರಿಚಯಿಸುವ ಮೂಲಕ ಮಲ್ಟಿ ಕ್ರಾಪ್ ಲೇಯರಿಂಗ್ ಅಳವಡಿಸಿಕೊಳ್ಳಲು ರೈತರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲಾಯಿತು. ಅದರೊಂದಿಗೆ, ಸೂಕ್ಷ್ಮ(ಮೈಕ್ರೋ) ನೀರಾವರಿ ವ್ಯವಸ್ಥೆಗಳ ಅಳವಡಿಕೆ ಮತ್ತು ಸೂಕ್ತವಾದ NRM ಕ್ರಮಗಳ ಮೂಲಕ ಮಣ್ಣು ಮತ್ತು ನೀರಿನ ಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ರೈತರಿಗೆ ಮಾರ್ಗದರ್ಶನ ನೀಡಲಾಯಿತು. ಹೆಚ್ಚು ನೀರಿನ ಅಗತ್ಯವಿರುವ ಬೆಳೆಗಳನ್ನು ಬೆಳೆಯುವುದನ್ನು ತಪ್ಪಿಸಲಾಯಿತು. ಸೌರಶಕ್ತಿ ಅನ್ವಯಕ್ಕೆ ಆದ್ಯತೆಯ ಆಧಾರದ ಮೇಲೆ ಸೂಕ್ತ ಸರ್ಕಾರಿ ಯೋಜನೆಗಳು/ಸೌಲಭ್ಯಗಳನ್ನು ಸರ್ಕಾರಿ ಇಲಾಖೆಗಳಿಂದ ಪಡೆಯಲು ರೈತರಿಗೆ ಸಂಪರ್ಕ ಕಲ್ಪಿಸಲಾಯಿತು.

8–10 ಎಕರೆ ಭೂಮಿಗೆ ಸಾಕಾಗುವಂತೆ 4 ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಸಮುದಾಯ ಆಧಾರಿತ ಮಾದರಿಯನ್ನು ರೂಪಿಸಲಾಗಿದೆ. ಸೋಲಾರ್ ಪಂಪ್ ಅಳವಡಿಸಿಕೊಂಡ ರೈತನನ್ನು ಮುಖ್ಯ ರೈತ(ಲೀಡ್ ಫಾರ್ಮರ್) ಎಂದು ಕರೆಯಲಾಗುತ್ತದೆ. ಅವನು 3 ಸಹ ರೈತರಿಗೆ ಕಡ್ಡಾಯವಾಗಿ ನೀರು ಒದಗಿಸಬೇಕು. ನೀರಿನ ಸೇವೆಯು ಮುಖ್ಯ ಹಾಗೂ ಸಹ ರೈತರ ನಡುವಿನ ಆಂತರಿಕ ಬದ್ಧತೆಯನ್ನು ಆಧರಿಸಿದೆ. ಈ ಸೇವೆಗೆ ಪರಸ್ಪರರ ಒಡಂಬಡಿಕೆಯಂತೆ ಹಣದ ಮೂಲಕ ಇಲ್ಲವೇ ವಸ್ತುಗಳನ್ನು (ಬೆಳೆಯನ್ನು ಹಂಚಿಕೊಳ್ಳುವುದು) ಹಂಚಿಕೊಳ್ಳುವ ಮೂಲಕ ಪಾವತಿಸಬಹುದು. ಇದು ರೈತನಿಗೆ ಸೋಲಾರ್ ಪಂಪ್‌ನ ಸಾಲವನ್ನು ತೀರಿಸಲು ಸಹಾಯಮಾಡುತ್ತದೆ.

ಇಂಜಿನಿಯರ್‌ಗಳು/ವೃತ್ತಿಪರರು ಮಾಡಿದ ಹಳ್ಳಿಯ ಜಲಮೂಲ/ಜಲಕುಹರಗಳ ಮ್ಯಾಪಿಂಗ್‌ನ ಫಲಿತಾಂಶಗಳ ಆಧಾರದ ಮೇಲೆ ಪ್ರತಿ ಸೌರ ಪಂಪನ್ನು ರೂಪಿಸಲಾಗುತ್ತದೆ. ಅಕ್ಟೋಬರ್ 2020ರಲ್ಲಿ, ಪ್ರಾಯೋಗಿಕ ಆಧಾರದ ಮೇಲೆ, 3 HP ಪಂಪ್‌ನೊಂದಿಗೆ ಸಮುದಾಯ ಸೌರ ನೀರಾವರಿ ಮಾದರಿಯನ್ನು ಸ್ಥಾಪಿಸಲಾಯಿತು. ಪಂಪ್ ಅನ್ನು ಬೆಳಿಗ್ಗೆ 7 ರಿಂದ ಸಂಜೆ 5 ರವರೆಗೆ ಕನಿಷ್ಠ ತಾಪಮಾನ 21°C ನೊಂದಿಗೆ ನಿರ್ವಹಿಸಬಹುದು. ಹನಿ ನೀರಾವರಿ ಮತ್ತು ತುಂತುರು ನೀರಾವರಿಗಳಿಗೆ ಈ ಪಂಪ್ ಸಾಕಾಗುತ್ತದೆ.

ಯಾದಗಿರಿ ಜಿಲ್ಲೆಯ ಯಾದಗಿರಿ, ಗುರ್ಮಿಟ್ಕಲ್ ಮತ್ತು ವಡಿಗೇರಾ ಬ್ಲಾಕ್‌ಗಳಲ್ಲಿ ಒಟ್ಟು 125 ಸಿಎಸ್ಐಎಂ ಘಟಕಗಳನ್ನು ಸ್ಥಾಪಿಸಲಾಗಿದೆ. ಒಟ್ಟು ಅನುಸ್ಥಾಪನ ವೆಚ್ಚ ಪ್ರತಿ ಯೂನಿಟ್‌ಗೆ ರೂ. 3,60,000, ಇದರಲ್ಲಿ ಯೋಜನೆಯ ಕೊಡುಗೆ ರೂ.1,49,000 ರೈತರು ರೂ. 36,000 ಕೊಡುಗೆ ನೀಡಿದರೆ ಉಳಿದದ್ದನ್ನು ಸಾಲವಾಗಿ ಬ್ಯಾಂಕ್ ರೂ. 1,75,000 ನೀಡಿದೆ. ಸಾಲವನ್ನು 5 ವರ್ಷಗಳ ಅವಧಿಯಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ರೂ.24,000ದಂತೆ ಹತ್ತು ಕಂತುಗಳಲ್ಲಿ ಮರುಪಾವತಿಸಬೇಕು. ಸುಕೊ ಬ್ಯಾಂಕು ಮತ್ತು ಎಸ್‌ಬಿಐ ಹೀಗೆ ಹಲವು ಪಾಲುದಾರರ ಮೂಲಕ ಸಸ್ಟೈನ್ ಪ್ಲಸ್ ಫೌಂಡೇಶನ್ ಹಣಕಾಸಿನ ನೆರವನ್ನು ಒದಗಿಸಿತು. ಮಾರಾಟದ ನಂತರ ಸೇವೆಗಳನ್ನು 5 ವರ್ಷಗಳವರೆಗೆ ಖಾತ್ರಿಯಾಗಿ ಒದಗಿಸಲಾಗುತ್ತದೆ. ಇದು 48 ಗಂಟೆಗಳ ಒಳಗೆ ಉಂಟಾಗುವ ಸಣ್ಣ/ದೊಡ್ಡ ರಿಪೇರಿಗಳನ್ನು ಒಳಗೊಂಡಂತೆ ವಿಮಾ ರಕ್ಷಣೆಯ ಅವಧಿಯೊಳಗೆ ಯಾವುದೇ ಭಾಗಕ್ಕೆ ಹಾನಿಯಾದಲ್ಲಿ ಅದನ್ನು ಬದಲಿಸಿ ಕೊಡಲಾಗುತ್ತದೆ. ಈ ಸೇವೆಯನ್ನು ಬೆಂಗಳೂರಿನ ಕದಮ್ ಅಗ್ರಿ. ಪ್ರೈವೇಟ್ ಲಿಮಿಟೆಡ್‌ನವರು ಒದಗಿಸಿದ್ದಾರೆ.

### ಮುಖ್ಯ ರೈತರು

ವೈವಿಧ್ಯಮಯ ಬೆಳೆಗಳಿಗೆ ನೀರುಣಿಸುವ ಜೊತೆಗೆ, ಮುಖ್ಯ ರೈತರು ಸಹವರ್ತಿ ರೈತರಿಗೆ ವರ್ಷದಲ್ಲಿ ಕನಿಷ್ಠ ಎರಡು ಬೆಳೆಗಳಿಗೆ ಪಾವತಿ

**ಚೌಕ 1 :**

**ತಾಂತ್ರಿಕ ವಿಶೇಷಣಗಳು**




| BOMಗೆ 5 ಹೆಚ್‌ಪಿ ಶಕ್ತಿ ಸೋಲಾರ್ ವ್ಯವಸ್ಥೆ | | | |
|---|---|---|---|
| ಕ್ರಮ ಸಂಖ್ಯೆ | ವಸ್ತುಗಳು | unit | qty |
| 1 | ಸೋಲಾರ್ ಪ್ಯಾನೆಲ್ | 300 watt | 16 |
| 2 | ಸೋಲಾರ್ ಪ್ಯಾನೆಲ್ ರಚನೆ | 8 plate | 2 |
| 3 | ಸೋಲಾರ್ ಮೋಟಾರು ಪಂಪ್ | 5 HP | 1 |
| 4 | ಸೋಲಾರ್ VFD ಡ್ರೈವ್ | 5 HP | 1 |
| 5 | ಅರ್ಥಿಂಗ್ ಘಟಕ | NA | 1 |
| 6 | ಲೈಟಿಂಗ್ ಅರೆಸ್ಟರ್ | NA | 1 |
| 7 | ಚೇಂಜ್ ಓವರ್ ಸ್ವಿಚ್ ಬಾಕ್ಸ್ | NA | 1 |
| 8 | ಸಾರಿಗೆ | NA | |
| 9 | ಅನುಸ್ಥಾಪನೆ / ಇನ್ಸ್ಟಾಲೇಶನ್ | NA | |
| 10 | ವಿಮೆ | 5 years | |
| 11 | ಎಂಎಂ ಶಕ್ತಿ ಸಬ್‌ಮರ್ಸಿಬಲ್ ಕೇಬಲ್ | 40 mtr | |
| 12 | upvc ಕಾಲಂ ಪೈಪ್ 2 ಇಂಚು 15 ಕೆಜಿ/ಸೆಂಮಿ$^2$ | 20 | |

**ಚೌಕ 2: ಸ್ಫೂರ್ತಿದಾಯಕ ಪ್ರಕರಣಗಳು**

ಯಾದಗಿರಿಯ ಬೆಳಗೇರಾ ಗ್ರಾಮ ವೆಂಕಟೇಶ ರಾಯಪ್ಪ ದಶಕಗಳಿಂದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು 6 ಎಕರೆ ಭೂಮಿಯನ್ನು ಹೊಂದಿದ್ದಾರೆ. ಹೆಸರುಕಾಳು, ನೆಲಗಡಲೆ, ಭತ್ತ ಮತ್ತು ಸೊಪ್ಪನ್ನು ಬೆಳೆಯುತ್ತಾರೆ. ಟಾಟಾ ಟ್ರಸ್ಟ್‌ನ ಕಲಿಕೆ ನಡೆಸಿದ ತರಬೇತಿಯಲ್ಲಿ ಭಾಗವಹಿಸಿದ ನಂತರ, ಅವರು ಸೋಲಾರ್ ಪಂಪ್ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿಕೊಂಡರು. ಯೋಜನೆಯ ಕ್ಷೇತ್ರ ಸಮನ್ವಯಾಧಿಕಾರಿಗಳ ಮಾರ್ಗದರ್ಶನದಲ್ಲಿ ಕೃಷಿಯ ವಿವಿಧ ತಂತ್ರಗಳನ್ನು ಕಲಿತರು. ವೆಂಕಟೇಶ ರಾಯಪ್ಪ ಈ ರೀತಿಯ ಪ್ರಯತ್ನ ಮಾಡಿದವರಲ್ಲಿ ಮೊದಲಿಗರು. ಸೋಲಾರ್ ಪಂಪ್ ಅನ್ನು 6–7 ಗಂಟೆಗಳ ಕಾಲ ಚಾಲೂ ಮಾಡಲಾಗುತ್ತದೆ. ಇದರ ಮೂಲಕ ಪ್ರತಿದಿನ ನೀರನ್ನು ಅವರ (ಆರು ಎಕರೆ) ಮತ್ತು ಇತರ ರೈತರೊಂದಿಗೆ ಹಂಚಿಕೊಳ್ಳಲಾಗುತ್ತದೆ. ಸೋಲಾರ್ ಪಂಪ್ ಹಾಕಿಸಿಕೊಂಡ ಬಳಿಕ ಅವರ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. 'ಬೆಳೆಗಳಿಗೆ ಸೂಕ್ತ ಸಮಯದಲ್ಲಿ ನೀರುಣಿಸಿದ್ದರಿಂದ ಇಳುವರಿಯು 30–40% ಹೆಚ್ಚಿತು' ಎಂದು ಅವರು ಹೇಳುತ್ತಾರೆ. ಸಹ ರೈತರ 7 ಎಕರೆ ಭೂಮಿಗೆ ನೀರನ್ನು ಹಂಚುವ ಮೂಲಕ ಎಕರೆಯೊಂದಕ್ಕೆ ರೂ. 6,500 ಹೆಚ್ಚುವರಿ ಆದಾಯ ಗಳಿಸುತ್ತಿದ್ದಾರೆ.

ರಾಮಲಿಂಗಪ್ಪ ಎಂಟು ಎಕರೆ ಭೂಮಿಯನ್ನು ಹೊಂದಿದ್ದಾರೆ. ಅವರು 5hp ಮೋಟಾರ್ ಇರುವ ಕೊಳವೆಬಾವಿಯನ್ನು ಹೊಂದಿದ್ದಾರೆ. ಇದನ್ನು ಹಾಕಿಸಿಕೊಳ್ಳುವುದಕ್ಕೆ ಮೊದಲು ಅವರು ಖಾರಿಫ್ ಮತ್ತು ರಾಬಿ ಋತುಗಳಲ್ಲಿ ನೆಲಗಡಲೆ ಮತ್ತು ಹತ್ತಿಯನ್ನು ಬೆಳೆಯುತ್ತಿದ್ದರು. ನಿಯಮಿತ ವಿದ್ಯುತ್ ಕಡಿತ ಮತ್ತು ಏರಿಳಿತಗಳಿಂದಾಗಿ ಮೋಟಾರ್ ಹಾಳಾಗುತ್ತಿತ್ತು. ಸೋಲಾರ್ ಪಂಪ್‌ಗಳಿಂದಾಗಿ ವೈವಿಧ್ಯಮಯ ಬೆಳೆಯನ್ನು ಬೆಳೆಯುತ್ತಿದ್ದು ಅವಶ್ಯಕತೆಯಿದ್ದಾಗ ಬೆಳೆಗಳಿಗೆ ನೀರನ್ನು ಒದಗಿಸುತ್ತಿದ್ದಾರೆ. ಸೊಪ್ಪು, ಈರುಳ್ಳಿ, ಮೂಲಂಗಿ, ಮೆಣಸಿನ ಕಾಯಿ, ಬೆಂಡೆಕಾಯಿ, ಹೀರೆಕಾಯಿ ಮತ್ತು ಕಲ್ಲಂಗಡಿ ಬೆಳೆಯಲಾರಂಭಿಸಿದ್ದಾರೆ. ಮನೆ ಬಳಕೆಗಾಗಿ ಖಾರಿಫ್ ಋತುವಿನಲ್ಲಿ ಸಾವಯವ ಭತ್ತವನ್ನು ಬೆಳೆಯುತ್ತಿದ್ದಾರೆ. ಸೋಲಾರ್ ಪಂಪ್ ಅಳವಡಿಕೆಗೆ ಮುನ್ನ ಅವರ ವಾರ್ಷಿಕ ಆದಾಯ ರೂ. 3,00,000ದಷ್ಟಿತ್ತು. ಈಗ ಈ ವ್ಯವಸ್ಥೆಯೊಂದಿಗೆ ಅವರು ಸುಮಾರು ಆರು ಲಕ್ಷ ರೂಪಾಯಿಗಳನ್ನು ಗಳಿಸುತ್ತಿದ್ದಾರೆ. ಸಹ ರೈತರೊಂದಿಗೆ ನೀರನ್ನು ಹಂಚಿಕೊಳ್ಳುವ ಮೂಲಕ ಹೆಚ್ಚುವರಿ ಆದಾಯವನ್ನು ಗಳಿಸುತ್ತಿದ್ದಾರೆ. ತಮ್ಮ 8 ಎಕರೆ ಮತ್ತು ಇತರ ರೈತರ 4 ಭೂಮಿಗೆ ನೀರನ್ನು ಒದಗಿಸುತ್ತಿದ್ದಾರೆ.

ಯಾದಗಿರಿ ತಾಲೂಕಿನ ಬಾಳಿಚಕ್ರ ಗ್ರಾಮದ ಈರಪ್ಪ ಭೀಮಣ್ಣ ಮೂರು ದಶಕಗಳಿಂದ ಬೇಸಾಯ ಮಾಡುತ್ತಿದ್ದರು, 6 ಎಕರೆ ಜಮೀನು ಹೊಂದಿದ್ದಾರೆ. ಸೋಲಾರ್ ಅಳವಡಿಕೆಯ ನಂತರ, ಡಿಸೆಂಬರ್ 2020 ರಲ್ಲಿ, ಅವರು ತೋಟಗಾರಿಕೆ ಬೆಳೆಗಳನ್ನು ಅಂದರೆ ಮೆಣಸಿನಕಾಯಿ, ಬದನೆ, ಟೊಮೆಟೊ, ಕಲ್ಲಂಗಡಿ ಇತ್ಯಾದಿಗಳನ್ನು ಬೆಳೆಯಲು ಪ್ರಾರಂಭಿಸಿದರು, "ಸುಲಭವಾದ ವಿದ್ಯುತ್ ನಿರ್ವಹಣೆ, ನಿರಂತರ ವಿದ್ಯುತ್ ಪೂರೈಕೆಗಳಿಂದಾಗಿ ತೋಟದಲ್ಲಿ ಸೋಲಾರ್ ಚಾಲಿತ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರಿಂದ 100% ತೃಪ್ತನಾಗಿದ್ದೇನೆ," ಎಂದು ಈರಪ್ಪ ಹೇಳುತ್ತಾರೆ. ಬೇಸಿಗೆಯಲ್ಲಿ ಅವರು 4.6 ಎಕರೆ ಜಮೀನಿನಲ್ಲಿ ಕಲ್ಲಂಗಡಿ ಬೆಳೆದು, 1.4 ಲಕ್ಷ ರೂಪಾಯಿ ಆದಾಯ ಗಳಿಸಿದರು. 0.6 ಎಕರೆ ಜಮೀನಿನಲ್ಲಿ ಸೌತೆಕಾಯಿ ಮತ್ತು ಬೆಂಡೆಕಾಯಿ ಬೆಳೆದು ರೂ. 25,000 ನಿವ್ವಳ ಲಾಭ ಗಳಿಸಿದ್ದಾರೆ. ರಾಬಿಯಲ್ಲಿ ಮೆಣಸಿನಕಾಯಿ ಬೆಳೆದು ರೂ. 45,000 ಮತ್ತು ಈರುಳ್ಳಿಯಿಂದ ರೂ. 25,000 ಆದಾಯ ಗಳಿಸಿದರು. ತೋಟಗಾರಿಕೆ ಇಲಾಖೆಯ ನೆರವಿನಿಂದ ಅವರ ಜಮೀನಿನಲ್ಲಿ ಆರು ಸೋಲಾರ್ ಪಂಪ್‌ಗಳನ್ನು ಅಳವಡಿಸಲಾಯಿತು. ಅವರು ತಮ್ಮ ಜಮೀನಿನಲ್ಲಿ ಕೀಟ ಬಲೆಗಳನ್ನು ಸ್ಥಾಪಿಸಿದರು. ಕೀಟನಾಶಕಗಳನ್ನು ಬಳಸದೆ ನೈಸರ್ಗಿಕವಾಗಿ ಕೀಟನಿಯಂತ್ರಣ ಮಾಡಲಾಗಿದೆ. ನೀರನ್ನು ಮೂವರು ರೈತರೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. ಒಪ್ಪಂದದ ಪ್ರಕಾರ, ಆ ರೈತರು ಬೆಳೆಗಳ ಮಾರಾಟದಿಂದ ಬರುವ ಹಣದಲ್ಲಿ ಕಾಲುಭಾಗವನ್ನು ನೀರು ಹಂಚಿಕೊಂಡದ್ದಕ್ಕೆ ಪ್ರತಿಯಾಗಿ ನೀಡುತ್ತಿದ್ದಾರೆ.

ಆಧಾರದ ಮೇಲೆ "ನೀರಿನ ಸೇವೆಯನ್ನು" ಒದಗಿಸುತ್ತಾರೆ. ಇದನ್ನು ಬ್ಯಾಂಕ್ ಕಂತುಗಳ ಮರುಪಾವತಿಗೆ ಬಳಸಿಕೊಳ್ಳಲಾಗುತ್ತದೆ.

## ಸಹ ರೈತರು

ವರ್ಷವಿಡೀ ನೀರು ಸಿಗುವುದರಿಂದ, ಸಹ ರೈತರು ತಮ್ಮ ಜಮೀನಿನಲ್ಲಿ ವೃತ್ತಿಪರರ ತಾಂತ್ರಿಕ ಬೆಂಬಲದೊಂದಿಗೆ ವಿವಿಧ ಬೆಳೆಗಳನ್ನು ಬೆಳೆಸುತ್ತಾರೆ.

ಉತ್ತಮ ತಾಂತ್ರಿಕ ವಿಶೇಷತೆಗಳಿಂದ ಬೆಂಬಲಿತವಾದ ಮಾದರಿಯನ್ನು (ಚೌಕ 1 ನೋಡಿ) ನೀರಾವರಿ ಅಗತ್ಯತೆಗಳು ಮತ್ತು ಹೂಡಿಕೆ ಮಾಡುವ ಇಚ್ಛೆಯ ಆಧಾರದ ಮೇಲೆ ಮುಖ್ಯ ರೈತರ ಜಮೀನಿನಲ್ಲಿ ಸ್ಥಾಪಿಸಲಾಗುತ್ತದೆ. ನೀರಿನ ಹಂಚಿಕೆಗಾಗಿ ಗುಂಪಿನಲ್ಲಿ ಆಯ್ಕೆ ಮಾಡಲಾಗುವ ರೈತರ ಜಮೀನು ನೀರಿನ ಪಂಪ್ ಪಕ್ಕದಲ್ಲಿರಬೇಕು ಅಥವಾ ಪಂಪ್ ನೀರನ್ನು ಒದಗಿಸಬಹುದಾದ ಪ್ರದೇಶದ ಮಿತಿಯೊಳಗೆ ಇರಬೇಕು. ಗುಂಪಿನಲ್ಲೇ ನಿರ್ದೇಶನಗೊಂಡ ನಿರ್ವಾಹಕರೊಬ್ಬರು ವಿವಿಧ ಸದಸ್ಯರ ಸೌರ ಪಂಪ್‌ನ ಬಳಕೆಯನ್ನು ದಾಖಲಿಸಿಕೊಂಡು ಸದಸ್ಯರಿಗೆ ವಿತರಿಸಿದ ನೀರಿನ ಪ್ರಮಾಣವನ್ನು ಆಧರಿಸಿ ಸೇವಾ ಶುಲ್ಕವನ್ನು ವಿಧಿಸುತ್ತಾರೆ.

ದಿನವೂ ತಾಂತ್ರಿಕ ಹಾಗೂ ಇನ್ನಿತರ ನೆರವನ್ನು ನೀಡುವ ಮೂಲಕ ಕಲಿಕೆ – ಟಾಟಾ ಟ್ರಸ್ಟ್ ಸದಾ ಜೊತೆಯಲ್ಲಿರುತ್ತದೆ. ಸುಸ್ಥಿರ ಕೃಷಿ ಪದ್ಧತಿಗಳು ಹಾಗೂ ವೈವಿಧ್ಯಮಯ ಬೆಳೆಗಳ ಮೂಲಕ ಹೆಚ್ಚಿನ ಆದಾಯವನ್ನು ಪಡೆಯಲು ರೈತರಿಗೆ ಅನುವು ಮಾಡಿಕೊಡಲು, ಯೋಜನಾ ತಂಡವು ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯಗಳು, KVK ಗಳು ಮತ್ತು ಇತರ ಪ್ರಧಾನ ಸಂಸ್ಥೆಗಳೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿತು. ಸಮಯಕ್ಕೆ ಸರಿಯಾಗಿ ಒಳಸುರಿಯುವಿಕೆಗಳ ಪೂರೈಕೆ ಮತ್ತು ಸೇವೆಗಳನ್ನು ಒದಗಿಸಲು ಸಂಬಂಧಿತ ಇಲಾಖೆಗಳೊಂದಿಗೆ ಸಂಪರ್ಕವನ್ನು ಏರ್ಪಡಿಸಲಾಯಿತು.

ನೀರಾವರಿ ಪೂರೈಕೆಯೊಂದಿಗೆ ಬೇಸಾಯದ ಭೂಮಿಯು ವಿಸ್ತರಣೆಯಾಗಿ ರೈತರ ಆದಾಯ ಸುಧಾರಿಸಿರುವುದನ್ನು ಗಮನಿಸಲಾಯಿತು. ಸೋಲಾರ್ ಮಾದರಿಯನ್ನು ಅಳವಡಿಸಿಕೊಂಡ ಮುಖ್ಯ ರೈತರಲ್ಲದೆ, ಸಹ ರೈತರು ನೀರಾವರಿ ನೆರವಿನೊಂದಿಗೆ ಬಹು ಬೆಳೆಯಿಂದ ಪ್ರಯೋಜನ ಪಡೆದಿದ್ದಾರೆ (ಚೌಕ 2 ನೋಡಿ).

**2) ಹಸಿರು ಮೇವು ಬೆಳೆಸಲು ಸೌರಶಕ್ತಿ ಚಾಲಿತ ಹೈಡ್ರೋಪೋನಿಕ್ ಘಟಕ**

ಗ್ರಾಮೀಣ ಸಮುದಾಯಗಳಲ್ಲಿ ಮೇಕೆಗಳು, ಎಮ್ಮೆಗಳು, ಹಸುಗಳು, ಎತ್ತುಗಳು ಇತ್ಯಾದಿ ಜಾನುವಾರುಗಳಿಗೆ ಸೂಕ್ತವಾದ ಮತ್ತು ಸಾಕಷ್ಟು ಮೇವನ್ನು ಪಡೆಯಲು ರೈತರು ಸಾಕಷ್ಟು ಕಷ್ಟಪಡುತ್ತಾರೆ. ಸಿರೋಹಿ ತಳಿಗಳ ವಿಷಯದಲ್ಲಿ ಗಂಭೀರವಾದ ಮೇವಿನ ಕೊರತೆಯನ್ನು ಎದುರಿಸಲಾಯಿತು. ಅವುಗಳನ್ನು ಸಲಹಲು ಹೆಚ್ಚು ಬೆಲೆಯ ಮೇವನ್ನು ಖರೀದಿಸಿ ಹೆಚ್ಚುವರಿ ವೆಚ್ಚದಲ್ಲಿ ಸಾಗಾಣಿಕೆ ಮಾಡಲಾಯಿತು.

ಈ ಸಮಸ್ಯೆಯನ್ನು ಪರಿಹರಿಸಲು ವಡಿಗೇರ ಯಾದಗಿರಿಯ ಗೊಂಡೆನೂರ ಮತ್ತು ಜೋಳದಡಗಿ ಗ್ರಾಮಗಳಲ್ಲಿ ಪ್ರಾಯೋಗಿಕ ಯೋಜನೆಗೆ ಚಾಲನೆ ನೀಡಲಾಯಿತು. 15 ವರ್ಷಕ್ಕೂ ಹೆಚ್ಚು ಕಾಲ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಪಿಡ್ಡಪ್ಪ ಹಾಗೂ ರಾಜಶೇಖರ್ ಪಾಟೀಲ್ ಅವರನ್ನು ಪ್ರಯೋಗಕ್ಕೆ ಆಯ್ಕೆ ಮಾಡಲಾಗಿದೆ.

ಪ್ರಾಯೋಗಿಕ ಯೋಜನೆಯು ಸಾಕಣೆ ಮತ್ತು ಸಂತಾನೋತ್ಪತ್ತಿಗಾಗಿ

ಐದು ಸಿರೋಹಿ ತಳಿಯ ಮೇಕೆಗಳೊಂದಿಗೆ ಸೌರ ಫಲಕ ಚಾಲಿತ ಹೈಡ್ರೋಪೋನಿಕ್ ವ್ಯವಸ್ಥೆಯನ್ನು ಒಳಗೊಂಡಿತ್ತು. ಇದು ಸಮರ್ಥವಾದ ಶಕ್ತಿ ಮೂಲವನ್ನು ಹೊಂದಿದೆ. ಕಡಿಮೆ – ಮಣ್ಣು ಕೃಷಿ ತಂತ್ರವನ್ನು ಆಧರಿಸಿದ, ಈ ಘಟಕಕ್ಕೆ ಕನಿಷ್ಠ ಪ್ರಮಾಣದ ನೀರು ಬೇಕಾಗುತ್ತದೆ. ಇದು ಸೌರಶಕ್ತಿಯನ್ನು ಆಧರಿಸಿದ್ದು ವಿದ್ಯುತ್ ಅಭಾವವಿರುವ ಪ್ರದೇಶಗಳಿಗೆ ಸೂಕ್ತವಾಗಿದೆ. ಉತ್ಪನ್ನದ ವೈಶಿಷ್ಟ್ಯವೆಂದರೆ ಅದರ ವಿನ್ಯಾಸ ಮತ್ತು ಮೇವು ಉತ್ಪಾದನೆಗೆ ತೆಗೆದುಕೊಳ್ಳುವ ಸಮಯ. ಭವಿಷ್ಯದಲ್ಲಿ ಮೇವಿನ ಮಾರಾಟವನ್ನು ಉದ್ಯಮವಾಗಿ ಕೂಡ ಪರಿಗಣಿಸಬಹುದು. ಇದು ಹೈಡ್ರೋಪೋನಿಕ್ ರೈತರಿಗೆ ಹೆಚ್ಚುವರಿ ಆದಾಯವನ್ನು ಒದಗಿಸುತ್ತದೆ. ಇದನ್ನು ಅಣಬೆ ಬೇಸಾಯಕ್ಕೂ ಬಳಸಬಹುದು.

**ಸೌರಶಕ್ತಿ ಹುದುಗುವ ಘಟಕ: ಪಂಚಗವ್ಯ ಮತ್ತು ಜೀವಾಮೃತದ ಬೃಹತ್ ಉತ್ಪಾದನೆ**

ಪಂಚಗವ್ಯ ಮತ್ತು ಜೀವಾಮೃತವನ್ನು ತಯಾರಿಕೆಗೆ ಸೌರಶಕ್ತಿ ಚಾಲಿತ ಹುದುಗುವ ಘಟಕವು ಯೋಜನೆಯಿಂದ ಪ್ರಯೋಗಿಸಲ್ಪಟ್ಟ ಮತ್ತೊಂದು ಮಾದರಿಯಾಗಿದೆ.

ಹಸಿರು ಕ್ರಾಂತಿ ನಡೆದಂದಿನಿಂದ, ಹೆಚ್ಚಿನ ಕೃಷಿ ವೆಚ್ಚ ಮತ್ತು ಕೀಟನಾಶಕ ಮುಕ್ತ ಆಹಾರ ಉತ್ಪಾದನೆಯು ರೈತರಿಗೆ ಸವಾಲಾಗಿದೆ. 80%ಗಿಂತ ಹೆಚ್ಚು ರೈತರು ಸಣ್ಣಭೂಮಿಯನ್ನು ಹೊಂದಿರುವಂತಹ ಯಾದಗಿರಿಯಂತಹ ಪ್ರದೇಶದಲ್ಲಿದು ಇನ್ನೂ ಕಷ್ಟ. ಸಣ್ಣ ಭೂಮಿಯಲ್ಲಿ ರೈತರು ತರಕಾರಿಗಳನ್ನು ಮತ್ತು ಹೆಚ್ಚು ಬೆಲೆಯ ತೋಟಗಾರಿಕಾ ಬೆಳೆಗಳಾದ ಕಲ್ಲಂಗಡಿಯನ್ನು ಬೆಳೆಯುತ್ತಾರೆ. ಇದು ಹೆಚ್ಚು ವೆಚ್ಚದ ಒಳಸುರಿಯುವಿಕೆಗಳನ್ನು ಬೇಡುತ್ತದೆ.

ಪಂಚಗವ್ಯ ಮತ್ತು ಜೀವಾಮೃತದಂತಹ ದ್ರವರೂಪದ ಗೊಬ್ಬರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಸೌರಶಕ್ತಿ ಚಾಲಿತ ಹುದುಗುವಿಕೆಯನ್ನು ಪರಿಚಯಿಸಲಾಗಿದೆ. ಸೌರಶಕ್ತಿ ಚಾಲಿತ ಸ್ಟಿರರ್ ಯಂತ್ರವನ್ನು ಡ್ರಮ್‌ನಲ್ಲಿ ಇರಿಸಲಾಗಿದೆ. ಈ ಯಂತ್ರವು ಸೋಲಾರ್ ಚಾರ್ಜ್ ಬ್ಯಾಟರಿಗಳಿಂದ ಗಂಟೆಗೊಮ್ಮೆ ಕಾರ್ಯನಿರ್ವಹಿಸುತ್ತದೆ. ದಿನವೊಂದಕ್ಕೆ ಆರು ಬಾರಿ ಇದನ್ನು ಮಾಡಲಾಗುತ್ತದೆ. ಈ ಪ್ರಕ್ರಿಯೆಯನ್ನು ಹತ್ತು ದಿನಗಳವರೆಗೆ ಮುಂದುವರೆಸಲಾಗುತ್ತದೆ. ಹತ್ತು ದಿನಗಳ ನಂತರ ಹುದುಗಿಸಿದ ಪದಾರ್ಥಗಳನ್ನು ಯಂತ್ರಕ್ಕೆ ಸಂಪರ್ಕಿಸಿರುವ ಫಿಲ್ಟರ್ ಟ್ಯೂಬ್‌ಗಳನ್ನು ಬಳಸಿ ಫಿಲ್ಟರ್ ಮಾಡಲಾಗುತ್ತದೆ ಮತ್ತು ಪ್ಲಾಸ್ಟಿಕ್ ಬಾಟಲಿಗಳಲ್ಲಿ ತುಂಬಲಾಗುತ್ತದೆ. ರೈತರಿಗೆ ಪಂಚಗವ್ಯವನ್ನು ಪ್ರತಿ ಲೀಟರ್‌ಗೆ ರೂ. 80 ರಂತೆ ಮಾರಾಟ ಮಾಡಲಾಗುತ್ತದೆ. ಬಿತ್ತನೆ, ಹೂವುಬಿಡುವ ಸಮಯ ಮತ್ತು ಕಾಯಿ ಕಟ್ಟುವ ಹಂತದಲ್ಲಿ ಬೆಳೆಗೆ ಅನ್ವಯಿಸಲಾಗುತ್ತದೆ.

**ಉಪಸಂಹಾರ**

ಭಾರತದಲ್ಲಿನ ಶಕ್ತಿಸಂಪನ್ಮೂಲಗಳ ಬೇಡಿಕೆಗಳ ಪ್ರಕಾರ, ಸೌರಶಕ್ತಿ ಚಾಲಿತ ವ್ಯವಸ್ಥೆಗಳು ರೈತರಿಗೆ ಉತ್ತಮವಾದ ಹಾಗೂ ಸೂಕ್ತವಾದ ಪರ್ಯಾಯ ಶಕ್ತಿ ಆಧಾರಿತ ವ್ಯವಸ್ಥೆಯಾಗಿದೆ. ಕೆಲವು ಪ್ರಾಥಮಿಕ ಹೂಡಿಕೆಯ ಅಗತ್ಯವಿದ್ದರೂ, ಅವು ಪರಿಸರ ಸ್ನೇಹಿಯಾಗಿದ್ದು ಯೋಜಿತ ವೈವಿಧ್ಯೀಕರಣದ ಮೂಲಕ ದೀರ್ಘಾವಧಿಯಲ್ಲಿ ಹೆಚ್ಚುವರಿ ಆದಾಯವನ್ನು ಪಡೆಯಲು ರೈತರಿಗೆ ಅನುವು ಮಾಡಿಕೊಡುತ್ತದೆ.

◆

**Arunkumar Shivaray**
Program Manager, Livelihoods
Kalike- Tata Trusts,
Sri Laxmi Nivas, Plot No. 14&15,
Behind Balaji Kalayana Mantap
Near Vanakeri Layout, Yadgir, 585201
ashivaray@tatatrusts.org

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 24, ಸಂಚಿಕೆ 4, ಡಿಸೆಂಬರ್ 2022.

**ಇಂದೇ ಭೇಟಿ ನೀಡಿ**

www.kannada.leisaindia.org

**ಪ್ರಾಯೋಗಿಕ ಕ್ಷೇತ್ರದ ಅನುಭವಗಳ ಒಂದು ನಿಧಿ**

# ಸಣ್ಣ ಉದ್ಯಮಗಳ ಮೂಲಕ ಗ್ರಾಮೀಣ ಮಹಿಳೆಯರಲ್ಲಿ ಆರ್ಥಿಕ ಕ್ರಾಂತಿ

**ಮಾಧುರಿ ರೇವಣವರ್**

**ಬಹುತೇಕ ಗ್ರಾಮೀಣ ಮಹಿಳೆಯರು ಭೂರಹಿತರು. ಅವರು ಹೊಲದಲ್ಲಿ ಕೂಲಿಯಾಳುಗಳಾಗಿ ದುಡಿಯುತ್ತಾರೆ. ಸಂಸ್ಕೃತಿ ಸಂವರ್ಧನ ಮಂಡಲ, ಎನ್ನುವ ಎನ್‌ಜಿಒ ಮಹಾರಾಷ್ಟ್ರದ ಸಗ್ರೋಲಿಯದ ಮಹಿಳೆಯರಿಗೆ ಅವರ ಉದ್ಯಮಗಳನ್ನು ನಡೆಸಲು ಸಾಲ ನೀಡುವ ಮೂಲಕ ಅವರು ಆರ್ಥಿಕವಾಗಿ ಸಬಲರಾಗಲು ಸಹಾಯ ನೀಡಿತು.**

ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಬಿಲೋಲಿಯಲ್ಲಿರುವ ಸಗ್ರೋಲಿಯು 2,046 ಕುಟುಂಬಗಳನ್ನು ಹೊಂದಿರುವ ದೊಡ್ಡ ಹಳ್ಳಿ. 2011 ರ ಜನಗಣತಿಯ ಪ್ರಕಾರ, ಒಟ್ಟು ಜನಸಂಖ್ಯೆ 8,494 ರಲ್ಲಿ 3,796 ಮಂದಿ ಮಹಿಳೆಯರಿದ್ದಾರೆ. ಪ್ರತಿಯೊಬ್ಬರ ಬಳಿ ಇರುವ ಭೂಮಿ ಸರಾಸರಿ 1.24 ಎಕರೆ. ಇಲ್ಲಿನ ಕೃಷಿಯು ಮಳೆಯಾಶ್ರಿತವಾಗಿದ್ದು ಎರಡು ಋತುಗಳವರೆಗೆ ಮಾತ್ರ ಅವರಿಗೆ ಕೆಲಸವಿರುತ್ತದೆ. ಉಳಿದ ಸಮಯದಲ್ಲಿ ಅವರು ನಿರುದ್ಯೋಗಿಗಳಾಗಿರುತ್ತಾರೆ.

ಸಂಸ್ಕೃತಿ ಸಂವರ್ಧನ ಮಂಡಲವು (SSM) ನಿರಂತರವಾಗಿ ಶಿಕ್ಷಣ, ಜೀವನೋಪಾಯ, ಕೌಶಲ್ಯ ಅಭಿವೃದ್ಧಿ, ಕೃಷಿ ಮತ್ತು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದೆ. ಇದು 500 ಮಹಿಳಾ ಸ್ವಸಹಾಯ ಗುಂಪುಗಳ (SHG) ರಚನೆಗೆ ಅನುವು ಮಾಡಿಕೊಟ್ಟಿತು. SSM ನಡೆಸುವ ಕೃಷಿ ವಿಜ್ಞಾನ ಕೇಂದ್ರದ (KVK) ಗೃಹ ವಿಜ್ಞಾನ ವಿಭಾಗವು ಆರೋಗ್ಯ ಮತ್ತು ಉದ್ಯಮಶೀಲತೆಯಲ್ಲಿ ಸ್ವಯಂಸಹಾಯಕ ಸಂಘಗಳಿಗೆ ತಾಂತ್ರಿಕ ಬೆಂಬಲವನ್ನು ನೀಡುತ್ತದೆ. ಕೆವಿಕೆ ನಿಯಮಿತವಾಗಿ ಸಿದ್ಧಉಡುಪುಗಳು, ಆಹಾರ ಸಂಸ್ಕರಣೆ, ಕೃಷಿಉತ್ಪನ್ನ ಸಂಸ್ಕರಣೆ, ಪ್ಯಾಕೇಜಿಂಗ್, ಕೋಳಿ ಸಾಕಣೆ, ಮೇಕೆ ಸಾಕಣೆ, ಹೈನುಗಾರಿಕೆ ಇತ್ಯಾದಿಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಈ ರೀತಿಯ ತರಬೇತಿ ಕಾರ್ಯಕ್ರಮಗಳ ಅವಧಿ ಒಂದು ದಿನದಿಂದ ಮೂರು ತಿಂಗಳವರೆಗೆ ಇರುತ್ತದೆ.

ಸರಳ ಮರುಪಾವತಿ ವಿಧಾನಗಳನ್ನು ಒಳಗೊಂಡಂತೆ, 2015–16 ರಿಂದ ಗ್ರಾಮದಲ್ಲಿನ 5–10 ಸಣ್ಣ ಉದ್ಯಮಿಗಳಿಗೆ ತಮ್ಮ ವ್ಯಾಪಾರವನ್ನು ಹೆಚ್ಚಿಸಲು SSM ಬಡ್ಡಿ ರಹಿತ ಆರ್ಥಿಕ ಬೆಂಬಲವನ್ನು ನೀಡುತ್ತಿದೆ. SSM ಅವರಿಗೆ ಹಣಕಾಸು ಮತ್ತು ಮಾರ್ಕೆಟಿಂಗ್‌ಗೆ ನೆರವು ನೀಡಿತು. ಇದು ಪ್ರತಿ ವರ್ಷ ಉದ್ಯಮಿಗಳ ಆದಾಯದಲ್ಲಿ 20–40% ಹೆಚ್ಚಳಕ್ಕೆ ಕಾರಣವಾಗಿದೆ. ಮುಂಬಯಿಯ ದೃಷ್ಟಿಯ ಎಂಬ್ರೇಸ್ ಎನ್ನುವ ಯೋಜನೆಯು ಇದಕ್ಕೆ ಬೆಂಬಲವನ್ನು ನೀಡುತ್ತಿದೆ. ಯೋಜನೆಯ ಮುಖ್ಯ ಉದ್ದೇಶಗಳು: ಗ್ರಾಮೀಣ ಮಹಿಳೆಯರು ತಮ್ಮ ಕುಟುಂಬವನ್ನು ಬೆಂಬಲಿಸಲು ಉದ್ಯಮಗಳನ್ನು ಪ್ರಾರಂಭಿಸಲು ಪ್ರೋತ್ಸಾಹಿಸುವುದು; ಅಗತ್ಯವಿರುವ ಗ್ರಾಮೀಣ ಮಹಿಳೆಯರು/ಯುವಕರಿಗೆ ಉದ್ಯಮಗಳನ್ನು ಪ್ರಾರಂಭಿಸಲು ಹಣಕಾಸಿನ ನೆರವು ನೀಡುವುದು; ಗ್ರಾಮೀಣ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಹೆಚ್ಚಿಸುವುದು; ಗ್ರಾಮೀಣ ಕುಟುಂಬಗಳ ಆರ್ಥಿಕ ಹೊರೆ ತಗ್ಗಿಸುವುದು.

## ಉಪಕ್ರಮ

SSM ಅಕ್ಟೋಬರ್ 2019 ರಿಂದ ಸಾವಿತ್ರಿಬಾಯಿ ಫುಲೆ ಮಹಿಳಾ ವಿಕಾಸ ಮಂಡಲದ ಮೂಲಕ ಗ್ರಾಮದ 42 ಸಣ್ಣ ಪ್ರಮಾಣದ ಉದ್ಯಮಿಗಳನ್ನು ಬೆಂಬಲಿಸಿದೆ. ಸಣ್ಣ ಉದ್ಯಮಿಗಳು ಮತ್ತು ಉದ್ಯಮ ಆರಂಭಿಸಲು ಆಸಕ್ತರಾಗಿರುವ ಮಹಿಳೆಯರಿಗೆ ವಾರ್ಷಿಕ 3% ಬಡ್ಡಿಯೊಂದಿಗೆ ಸಣ್ಣ ಪ್ರಮಾಣದ ಹಣಕಾಸಿನ ನೆರವನ್ನು ನೀಡಿತು. ಅಂತಹ ಉದ್ಯಮಿಗಳನ್ನು ಗುರುತಿಸುವ ಕೆಲಸವನ್ನು ಮಹಿಳಾ ಮಂಡಲ ಮಾಡಿತು.

ಸಗ್ರೋಳಿ ಗ್ರಾಮ ಹಾಗೂ ಅದರ ಸುತ್ತಮುತ್ತಲಿನಲ್ಲಿರುವ ಒಟ್ಟು 51 ಮಹಿಳೆಯರು ಮತ್ತು ಯುವಕರು ಮಹಿಳಾ ಮಂಡಳಕ್ಕೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದರು. ಫಲಾನುಭವಿಗಳನ್ನು ಆಯ್ಕೆ ಮಾಡಲು ಮಂಡಲವು ಮೂವರು ಸದಸ್ಯರ ಸಮಿತಿಯನ್ನು ನೇಮಿಸಿದೆ. ಅಕ್ಟೋಬರ್ 2019ರಲ್ಲಿ, 15 ಮಂದಿ ಫಲಾನುಭವಿಗಳ ಮೊದಲ ಬ್ಯಾಚ್ ಅನ್ನು ಗುರುತಿಸಲಾಯಿತು. ಅದೇ ರೀತಿ ಕ್ರಮವಾಗಿ 20 ಮತ್ತು 7 ಫಲಾನುಭವಿಗಳನ್ನು ಹೊಂದಿರುವ ಎರಡನೇ ಮತ್ತು ಮೂರನೇ ಬ್ಯಾಚ್ ಅನ್ನು ಗುರುತಿಸಲಾಗಿದೆ. ಈ ರೀತಿ 42 ಮಂದಿ ಎಂಬ್ರೇಸ್ ಯೋಜನೆಯ ಲಾಭ ಪಡೆದಿದ್ದಾರೆ.

ಕಾನೂನು ಒಪ್ಪಂದದೊಂದಿಗೆ ಫಲಾನುಭವಿಗಳನ್ನು ಅವರ ವ್ಯಾಪಾರದ ವ್ಯಾಪ್ತಿ, ಮರುಪಾವತಿ ಸಾಮರ್ಥ್ಯ ಮತ್ತು ಹಿನ್ನೆಲೆಯ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಸಾಲದ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಯಿತು.

ಫಲಾನುಭವಿಗಳನ್ನು ವಿವಿಧ ವಹಿವಾಟುಗಳಡಿಯಲ್ಲಿ ವಿಂಗಡಿಸಲಾಗಿದೆ (ನೋಡಿ ಕೋಷ್ಟಕ 1). ಇದರಲ್ಲಿ ಉಡುಪುಗಳು (ಟೈಲರಿಂಗ್, ಬಟ್ಟೆ ವ್ಯಾಪಾರ), ಚಿಲ್ಲರೆ ವ್ಯಾಪಾರ (ಕಿರಾಣಿ ಅಂಗಡಿ, ಜನರಲ್ ಸ್ಟೋರ್, ಲೇಡೀಸ್ ಎಂಪೋರಿಯಂ, ಬ್ಯಾಂಗಲ್ ಸ್ಟೋರ್ ಇತ್ಯಾದಿ), ಪಶುಸಂಗೋಪನೆ (ಆಡು/ಮೇಕೆ ಸಾಕಣೆ, ಹೈನುಗಾರಿಕೆ, ಮೀನುಸಾಕಣೆ), ಕರಕುಶಲ ವಸ್ತುಗಳು (ಬುಟ್ಟಿ), ಪೀಠೋಪಕರಣ ಮತ್ತು ಆಹಾರ ಸಂಸ್ಕರಣೆ (ಬೇಳೆ ಮಿಲ್, ಮಸಾಲೆ ಪದಾರ್ಥ ತಯಾರಿ ಘಟಕ, ಹಿಟ್ಟಿನ ಗಿರಣಿ, ಎಣ್ಣೆಗಾಣ ಇತ್ಯಾದಿ). 2019–20ರಲ್ಲಿ 35 ಮಹಿಳೆಯರು ಮತ್ತು 2021ರಲ್ಲಿ 7 ಮಂದಿ ತಮ್ಮ ವ್ಯಾಪಾರವನ್ನು ಆರಂಭಿಸಿದರು.

**ಕೋಷ್ಟಕ 1. ವ್ಯಾಪಾರ ಮತ್ತು ಉದ್ಯಮಗಳು**

| ಕ್ರ.ಸಂ | ವಹಿವಾಟು/ವ್ಯಾಪಾರ | ಉದ್ಯಮಗಳ ಸಂಖ್ಯೆ | |
|---|---|---|---|
| | | **2019–20** | **2021** |
| 1 | ಗಾರ್ಮೆಂಟ್ | 7 | 1 |
| 2 | ಚಿಲ್ಲರೆ | 16 | |
| 3 | ಪಶುಸಂಗೋಪನೆ | 10 | |
| 4 | ಕರಕುಶಲ ಮತ್ತು ಪೀಠೋಪಕರಣ | 2 | |
| 5 | ಆಹಾರ ಸಂಸ್ಕರಣೆ | | 5 |
| 6 | ಮೀನುಸಾಕಣೆ | | 1 |
| | ಒಟ್ಟು | 35 | 7 |

2019–20ನೇ ಸಾಲಿನಲ್ಲಿ 35ರಲ್ಲಿ 16 ಮಂದಿ ಕಿರಾಣಿ ಅಂಗಡಿ, ಕ್ಷೌರ, ಎಲೆಕ್ಟ್ರಿಕಲ್, ಮೊಬೈಲ್, ಬಳೆ ಅಂಗಡಿ, ಜನರಲ್ ಸ್ಟೋರ್ ಮುಂತಾದ ಚಿಲ್ಲರೆ ವ್ಯಾಪಾರ ಆರಂಭಿಸಿದರು. 10 ಮಂದಿ ಹೈನುಗಾರಿಕೆ, ಕೋಳಿ ಸಾಕಣೆ ಮತ್ತಿತರ ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡರು. ಗಾರ್ಮೆಂಟ್ ವಲಯದಲ್ಲಿ (7), ಕರಕುಶಲ ಮತ್ತು ಪೀಠೋಪಕರಣ ಉದ್ಯಮಗಳಲ್ಲಿ (2) ತೊಡಗಿಸಿಕೊಂಡರು.

2021 ರಲ್ಲಿ, 7 ಮಂದಿ ಉದ್ಯಮಿಗಳಲ್ಲಿ 5 ಮಂದಿ ಆಹಾರ ಸಂಸ್ಕರಣಾ ವಲಯಕ್ಕೆ ಸೇರಿದವರು. ಅವರು ದಾಲ್–ಮಿಲ್‌ಗಳು, ಹಿಟ್ಟಿನ ಗಿರಣಿಗಳು, ಮಸಾಲೆ ತಯಾರಿಕೆ ಘಟಕಗಳು, ಆಹಾರ ಪ್ಯಾಕೇಜಿಂಗ್ ಮತ್ತು ತೈಲ ಹೊರತೆಗೆಯುವ ಘಟಕಗಳನ್ನು ಆರಂಭಿಸಿದರು. ಒಬ್ಬರು ಬಟ್ಟೆ ಅಂಗಡಿಯನ್ನು ಆರಂಭಿಸಿದರು. ಇನ್ನೊಬ್ಬರು ತಮ್ಮ ಮೀನುಗಾರಿಕೆ ವ್ಯವಹಾರಕ್ಕಾಗಿ ಮೀನು ಬಲೆಗಳನ್ನು ಖರೀದಿಸಿದರು.

**ಸಾಲದ ಮೊತ್ತವನ್ನಾಧರಿಸಿದ ವರ್ಗಗಳು:** ಎಲ್ಲಾ ಉದ್ಯಮಗಳನ್ನು ಸಾಲದ ಮೊತ್ತವನ್ನಾಧರಿಸಿ ವಿವಿಧ ಶ್ರೇಣಿಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಗಾರ್ಮೆಂಟ್ ವ್ಯಾಪಾರದ ಅಡಿಯಲ್ಲಿ ಹೆಚ್ಚಿನ ಉದ್ಯಮಿಗಳಿಗೆ (ಶೇ. 14.28) ರೂ. 40,001 – 70,000 ಸಾಲವನ್ನು ನೀಡಲಾಗಿದೆ. 7.14 ರಷ್ಟು ಉದ್ಯಮಿಗಳು ಮಾತ್ರ ರೂ 20,001–40,000 ವರೆಗೆ ಸಾಲವನ್ನು ಪಡೆದಿದ್ದಾರೆ. ಚಿಲ್ಲರೆ ವ್ಯಾಪಾರದಡಿಯಲ್ಲಿ ಗರಿಷ್ಠ ಅಂದರೆ ಶೇ. 21.42ರಷ್ಟು ಉದ್ಯಮಿಗಳು ರೂ. 20,001 ರಿಂದ 40,000ವರೆಗೆ, ಶೇ. 9.52ರಷ್ಟು ಮಂದಿ ರೂ. ರೂ. 40,001 ರಿಂದ 70,000ರದವರೆಗೆ ಮತ್ತು ಕೇವಲ ಶೇ. 4.76ರಷ್ಟು ಮಂದಿ ರೂ. 20,000ಗಿಂತ ಕಡಿಮೆ ಮೊತ್ತದ ಸಾಲವನ್ನು ಪಡೆದಿದ್ದಾರೆ. ಪಶುಸಂಗೋಪನೆ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಲ್ಲಿ ಶೇ.19.04ರಷ್ಟು ಉದ್ಯಮಿಗಳು ರೂ. 40,001 ರಿಂದ 70,000 ಮತ್ತು ಶೇ. 7.14ರಷ್ಟು ಮಂದಿ ರೂ. 20,001 ರಿಂದ 40,000 ಸಾಲ ಪಡೆದಿದ್ದಾರೆ. ಆಹಾರ ಸಂಸ್ಕರಣಾ ವಲಯದಲ್ಲಿ ಶೇ.7.14ರಷ್ಟು ಉದ್ಯಮಿಗಳಿಗೆ ರೂ. 40,001 ರಿಂದ 70,000 ವರೆಗೆ, ಶೇ. 2.38 (ಒಬ್ಬರಿಗೆ) ಸಾಲ ರೂ. 20,001 ರಿಂದ 40,000 ಮತ್ತು ಶೇ. 2.38 (ಒಬ್ಬರಿಗೆ) ರೂ. 70,001ಕ್ಕಿಂತ ಕಡಿಮೆ ಸಾಲ ಪಡೆದಿದ್ದಾರೆ. ಕರಕುಶಲ ಮತ್ತು ಪೀಠೋಪಕರಣ ವ್ಯಾಪಾರಕ್ಕಾಗಿ, ಇಬ್ಬರು ಉದ್ಯಮಿಗಳಲ್ಲಿ ಒಬ್ಬರು (ಶೇ. 2.38) ರೂ. 20,001 ರಿಂದ 40,000 ಮತ್ತು ಮತ್ತೊಬ್ಬರು (ಶೇ. 2.38) ರೂ. 40,001 ರಿಂದ 70,000 ಸಾಲ ಪಡೆದಿದ್ದಾರೆ.

35 ಉದ್ಯಮಿಗಳಲ್ಲಿ 21 ಮಂದಿ ವಾರ್ಷಿಕ ರೂ. 24,000 ರಿಂದ 1,80,000 ನಿವ್ವಳ ಲಾಭವನ್ನು (ಸರಾಸರಿ ರೂ. 47,714.29) ಅವರು ನಡೆಸುತ್ತಿದ್ದ ಉದ್ಯಮಗಳಿಂದ ಪಡೆದರು. ಇತರರು ಮೊದಲ ಬಾರಿಗೆ ಉದ್ಯಮಿಗಳಾಗಿದ್ದರಿಂದ ಯಾವುದೇ ಆದಾಯವನ್ನು ಪಡೆಯಲಿಲ್ಲ. EMBRACE ಯೋಜನೆಯಿಂದ ಸಾಲವನ್ನು ಪಡೆದ ನಂತರ, ಎಲ್ಲಾ ಉದ್ಯಮಿಗಳು ಹೊಸ ಉದ್ಯಮವನ್ನು ಆರಂಭಿಸಿದರು ಅಥವಾ ಈಗಾಗಲೇ ನಡೆಸುತ್ತಿರುವ ವ್ಯಾಪಾರವನ್ನು ವಿಸ್ತರಿಸಿದರು ಮತ್ತು ವಾರ್ಷಿಕ ಸರಾಸರಿ ರೂ. 88,514.29 (ರೂ. 24,000 ರಿಂದ 2,20,000) ಲಾಭವನ್ನು ಪಡೆದರು. ಹೀಗಿದ್ದೂ, ಎಲ್ಲ ಉದ್ಯಮಿಗಳ ಆದಾಯವು ಸುಮಾರು ರೂ. 40,800.00 ರಷ್ಟಿತ್ತು.

## ಸ್ಫೂರ್ತಿ ಕತೆಗಳು

ಮಹಾದೇವಿ ಸಂಜಯ್ ಕೊಟ್ನೋಡ್ ತನ್ನ ಗಂಡ, ಇಬ್ಬರು ಮಕ್ಕಳೊಂದಿಗೆ ಸಗ್ರೋಲಿಯಲ್ಲಿ ವಾಸಿಸುತ್ತಿದ್ದಾರೆ. ಅವಳ ಗಂಡ ಶಾಲೆಯೊಂದರಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದ. ಅವನ ಸಂಬಳವು ಕುಟುಂಬದ ವೆಚ್ಚಗಳನ್ನು ಸರಿದೂಗಿಸಲು ಸಾಕಾಗುತ್ತಿರಲಿಲ್ಲ. ಹಾಗಾಗಿ ಅವಳು ತನ್ನ ಕುಟುಂಬಕ್ಕೆ ನೆರವಾಗಲು ನಿರ್ಧರಿಸಿದಳು. ಅವಳಿಗೆ ಟೈಲರಿಂಗ್ ಚೆನ್ನಾಗಿ ಬರುತ್ತಿತ್ತು. ಅವಳು ಬಟ್ಟೆ ಹೊಲೆದುಕೊಡಲು ಶುರುಮಾಡಿದಳು. ಅದಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿತು. ಅವಳ ವ್ಯಾಪಾರ ಹೆಚ್ಚಿದಂತೆ ಮಾರ್ಕೆಟ್ ಬಳಿ ಅಂಗಡಿ ಇಡಲು ನಿರ್ಧರಿಸಿದಳು. ಅದಕ್ಕೆ ಒಂದು ಲಕ್ಷ ಬಂಡವಾಳದ ಅಗತ್ಯವಿತ್ತು. ಐವತ್ತು ಸಾವಿರ ರೂಪಾಯಿಗಳನ್ನು ಮಾತ್ರ ಹೊಂದಿಸಲು ಅವಳಿಗೆ ಸಾಧ್ಯವಾಯಿತು. ಉಳಿದ ಹಣಕ್ಕಾಗಿ EMBRACE ಯೋಜನೆಯ ಸಂಸ್ಕೃತಿ ಸಂವರ್ಧನ ಮಂಡಳಕ್ಕೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದಳು. ಈಗ ಮಹಿಳೆಯರ ಎಲ್ಲ ಬಗೆಯ ಬಟ್ಟೆಗಳನ್ನು ಹೊಲಿದು ಕೊಡುವ ಮೂಲಕ ತನ್ನ ವ್ಯಾಪಾರವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾಳೆ. ಅವಳ ಅಂಗಡಿಯ ಹೆಸರು "ಗೌರಿ ಲೇಡೀಸ್ ಎಂಪೋರಿಯಂ." ಅವಳ ಗಂಡ ಅಂಗಡಿಗೆ ಅಗತ್ಯವಾದ ವಸ್ತುಗಳನ್ನು ನಾಂದೇಡ್ ಮತ್ತು ನಿಜಾಮಾಬಾದ್‌ನಿಂದ ತರಲು ಸಹಾಯಮಾಡುತ್ತಾನೆ. ಅಂಗಡಿ ಇಡುವುದಕ್ಕೆ ಮುಂಚೆ ತಿಂಗಳಿಗೆ ರೂ. 1,000 ಸಂಪಾದಿಸುತ್ತಿದ್ದಳು. ಈಗ ತಿಂಗಳಿಗೆ ರೂ. 6,000 ಗಳಿಸುತ್ತಿದ್ದಾಳೆ. ಅವಳ ಆತ್ಮವಿಶ್ವಾಸವೂ ಹೆಚ್ಚಿದ್ದು ಖುಷಿಯಾಗಿದ್ದಾಳೆ. ತನಗೆ ಲಾಭವನ್ನು ಅಂಗಡಿಗೆ ಹೆಚ್ಚುವರಿ ವಸ್ತುಗಳನ್ನು ತರಲು ಬಳಸುತ್ತಿದ್ದಾಳೆ.

ಪ್ರಗತಿ ಟೆಕ್ಸ್‌ಟೈಲ್ಸ್ 2015ರಲ್ಲಿ ಆರಂಭವಾದ ಟೈಲರಿಂಗ್ ಘಟಕ. ಶ್ರೀಮತಿ ಶಾಂತಾ ಹರಳೆ, ಸುಶಾಮಾ ಮುಟ್ಟೆಪೋಡ್, ಸುನಿತಾ ಕೊಳ್ನೂರೆ ಮತ್ತು ಮೋಸಿನ ಕೊರಬೊ ಎನ್ನುವ ನಾಲ್ವರು ಮಹಿಳೆಯರ ಗುಂಪು ಕೃಷಿ ವಿಜ್ಞಾನ ಕೇಂದ್ರದಿಂದ ವಿವಿಧ ಬಗೆಯ ಬ್ಯಾಗ್

**ಕೋಷ್ಟಕ 2. ಸಾಲದ ಮೊತ್ತದ ವಿವಿಧ ವರ್ಗಗಳ ಅಡಿಯಲ್ಲಿ ಶೇಕಡಾವಾರು EMBRACE ಉದ್ಯಮಿಗಳು**

| ಕ್ರ.ಸಂ | ವಹಿವಾಟು/ವ್ಯಾಪಾರ | EMBRACE ಸಾಲದಿಂದ (ರೂ.) ಲಾಭ ಪಡೆದ ಶೇಕಡವಾರು ಉದ್ಯಮಿಗಳು (N = 42) | | | |
|---|---|---|---|---|---|
| | | | **20001 –** 40000/– | **40001 –** 70000/– | **>70000/–** |
| 1 | ಗಾರ್ಮೆಂಟ್ | 0 | | 14.28 (6) | 0 |
| 2 | ಚಿಲ್ಲರೆ | 4.76 (2) | | 9.52 (4) | 0 |
| 3 | ಪಶುಸಂಗೋಪನೆ | 0 | | 19.04 (8) | 0 |
| 4 | ಕರಕುಶಲ ಮತ್ತು ಪೀಠೋಪಕರಣ | 0 | | 2.38 (1) | 0 |
| 5 | ಆಹಾರ ಸಂಸ್ಕರಣೆ | 0 | | 7.14 (3) | 2.38 (1) |




ಸಾಲ ಪಡೆದ ಮೇಲೆ ಮಹಾದೇವಿ ಹೊಸ ಅಂಗಡಿಯ ಮೂಲಕ ತನ್ನ ವ್ಯಾಪಾರವನ್ನು ವಿಸ್ತರಿಸಿದಳು

ತಯಾರಿಕೆಯ ತರಬೇತಿ ಪಡೆದ ನಂತರ ಈ ಘಟಕವನ್ನು ಆರಂಭಿಸಿದರು. ಇವರು ಸಮವಸ್ತ್ರ, ವಿವಿಧ ರೀತಿಯ ಬ್ಯಾಗ್‌ಗಳು, ಕಿಚನ್ ಏಪ್ರಾನ್‌ಗಳು, ಸೀರೆ ಪೆಟಿಕೋಟ್, ಸನ್ ಕೋಟ್‌ಗಳು ಮತ್ತು ಹತ್ತಿ ಆರಿಸುವಾಗ ಬಳಸುವ ಏಪ್ರನ್, ಸೋಯಾಬೀನ್ ಕೊಯ್ಲು ಮಾಡುವಾಗ ಹಾಕಿಕೊಳ್ಳುವ ಕೈಗವಸುಗಳನ್ನು ಹೊಲಿಯಲು ಆರಂಭಿಸಿದರು. ಇವುಗಳೊಂದಿಗೆ ಮಹಿಳೆಯರಿಗೆ ಬೇಕಾಗುವ ದಿನನಿತ್ಯದ ವಸ್ತುಗಳನ್ನು ಅಂಗಡಿಯಲ್ಲಿ ಇಡಲು ಬಯಸಿದರು. ಆದರೆ ಅಂಗಡಿ ಚಿಕ್ಕದಾದ್ದರಿಂದ ಅದು ಸಾಧ್ಯವಾಗಲಿಲ್ಲ. EMBRACE ಯೋಜನಡಿಯಲ್ಲಿನ ದೃಷ್ಟಿಯ ಮೂಲಕ ಅವರಿಗೆ ರೂ. 50,000 ಹಣಕಾಸಿನ ನೆರವು ಸಿಕ್ಕಾಗ ಅವರು ಬಾಡಿಗೆಗೆ ಹೊಸ ಅಂಗಡಿಯೊಂದನ್ನು ಡಿಸಂಬರ್ 2019ರಲ್ಲಿ ತೆಗೆದುಕೊಂಡರು.

ಅವರು ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಬೇಕಾಗುವ ದೈನಂದಿನ ವಸ್ತುಗಳನ್ನು ಖರೀದಿಸಿದರು. ಬ್ಯಾಗುಗಳ ತಯಾರಿಕೆಗೆ ಹೆಚ್ಚಿನ ವಸ್ತುಗಳನ್ನು ಖರೀದಿಸಿದರು. ಮೊದಲು ಅವರು ಸಮವಸ್ತ್ರಗಳನ್ನು ಹೊಲಿದುಕೊಡುವ ಮೂಲಕ ವರ್ಷಕ್ಕೆ ರೂ. 1,50,000 ಸಂಪಾದಿಸುತ್ತಿದ್ದರು. ಈಗ ದಿನವೊಂದಕ್ಕೆ ಸರಾಸರಿ ರೂ. 1,000 ಮೌಲ್ಯದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಪ್ರಗತಿ ಟೆಕ್ಸ್‌ಟೈಲ್ ಘಟಕವು ಉಳಿದ ಮಹಿಳೆಯರಿಗೂ ತರಬೇತಿ ನೀಡಿದೆ. ದುರದೃಷ್ಟವಶಾತ್, ಕೋವಿಡ್ 19ರ ಲಾಕ್‌ಡೌನ್‌ನಿಂದಾಗಿ ಅವರು ನಷ್ಟವನ್ನು ಅನುಭವಿಸಬೇಕಾಯಿತು.

ಜುಲೈ 2020ರಲ್ಲಿ ಸೋಯಾಬಿನ್ ಕೊಯ್ಲಿಗೆ ಕೈಗವಸುಗಳು ಮತ್ತು ಹತ್ತಿ ಆರಿಸಲು ಬೇಕಾಗುವ ಕೋಟ್‌ಗಳ ಅಗತ್ಯವನ್ನು ಪರಿಗಣಿಸಿ ರಾಜ್ಯ ಕೃಷಿ ಇಲಾಖೆಯು (ಮರಾಠವಾಡ ಮತ್ತು ವಿದರ್ಭ ವಲಯದಲ್ಲಿ) ಕೃಷಿಯಲ್ಲಿ ಹವಾಮಾನ ಸ್ಥಿತಿಸ್ಥಾಪಕತ್ವದ ಯೋಜನೆಯ ಅಡಿಯಲ್ಲಿ ಅವುಗಳನ್ನು ಹೊಲಿಯುವ ಆರ್ಡರ್ ನೀಡಿತು. 1,563 ಹತ್ತಿ ಆರಿಸಲು ಬೇಕಾಗುವ ಕೋಟ್‌ಗಳು ಮತ್ತು 1,606 ಕೈಗವಸುಗಳನ್ನು ಹೊಲಿಯಲು ಸಗ್ರೋಳಿಯ ಕೃಷಿ ವಿಜ್ಞಾನ ಕೇಂದ್ರಕ್ಕೆ ಆರ್ಡರ್ ನೀಡಿತು. ಪ್ರಗತಿ ಘಟಕದ ಮಹಿಳೆಯರ ನೇತೃತ್ವದಲ್ಲಿ ಎಲ್ಲ ಮಹಿಳೆಯರು ಒಟ್ಟಾಗಿ ಕೆಲಸ ಮಾಡಿ ತಿಂಗಳೊಳಗೆ ಕೆಲಸ ಮುಗಿಸಿದರು. ಕೋಟ್‌ಗೆ ರೂ. 270 ಮತ್ತು ಕೈಗವಸಿಗೆ ರೂ. 170 ದರ ನಿಗದಿ ಮಾಡಿತು. ಒಂದು ಕಾಟನ್ ಕೋಟಿಗೆ ರೂ. 80 ಮತ್ತು ಒಂದು ಜೊತೆ ಕೈಗವಸಿಗೆ ರೂ. 50 ಹೊಲಿಗೆ ದರವನ್ನು ನೀಡಲಾಯಿತು. ಹೀಗೆ, ಈ ಕೋಟ್ ಮತ್ತು ಕೈಗವಸುಗಳನ್ನು ಹೊಲಿದ 54 ಮಹಿಳೆಯರ ಈ ಗುಂಪಿಗೆ ಒಟ್ಟು ರೂ. 2,50,000 ಹೊಲಿಗೆ ಶುಲ್ಕವಾಗಿ ಮತ್ತು ಪ್ರಗತಿ ಜವಳಿ ಸಮೂಹಕ್ಕೆ ರೂ. 1,50,000 ಶುಲ್ಕ ನೀಡಿತು. ಅವರೆಲ್ಲರಿಗೂ ಇದರಿಂದ ಸಂತೋಷವಾಯಿತು. ಅವರು ಭವಿಷ್ಯದಲ್ಲಿ ತಮ್ಮ ಕೆಲಸವನ್ನು ಇನ್ನಷ್ಟು ಉತ್ತಮಗೊಳಿಸಿಕೊಳ್ಳಲು ಬಯಸಿದ್ದಾರೆ.

◆

**Madhuri Revanwar**
Scientist (home Science)
Sanskriti Samvardhan Mandal's
Krishi Vigyan Kendra, Sagroli.
Tq. Biloli Dist. Nanded
Maharashtra, INDIA
E-mail: madhuri.kvksagroli@gmail.com

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 24, ಸಂಚಿಕೆ 4, ಡಿಸೆಂಬರ್ 2022.